


# ಬಿ. ಜಯಮ್ಮ

## ರಂಗತಾರೆ

ಕರ್ನಾಟಕ ಸರ್ಕಾರ



# ಬಿ. ಜಯಮ್ಮ

ರಂಗತಾರೆ



# ಬಿ. ಜಯಮ್ಮ

## ರಂಗತಾರೆ

**ಪರಿಚಯ ಪುಸ್ತಕ**

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨
ದೂರವಾಣಿ : ೨೨೨೧೩೫೩೦ / ೨೨೨೪೧೩೨೫

**B. JAYAMMA- Rangatare**
Published by
**K.A. DAYANANDA**, KAS
The Director
Department of Kannada and Culture
Kannada Bhavana, J.C. Road
Bengaluru-560 002

**ಬಿ. ಜಯಮ್ಮ-ರಂಗತಾರೆ**
ಪ್ರಕಾಶಕರು
ನಿರ್ದೇಶಕರು
**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು-560 002

First Edition : 2016
Pages : 56
Copies : 1000

ಪ್ರಥಮ ಮುದ್ರಣ : 2016
ಪುಟಗಳು : 56
ಪ್ರತಿಗಳು : 1000

Coverpage & Inner Page
Designed by
ARUN KUMAR G

ಮುಖಪುಟ ಮತ್ತು ಒಳಪುಟ ವಿನ್ಯಾಸ
**ಅರುಣ್‌ಕುಮಾರ್ ಜಿ.**

Photographs
Dr. B. Jayashree,
Information & Public Relation Dept.
Pragati Ashwatnarayana
Bhavani Lakshminarayana
V. J. Pruthvi

ಛಾಯಾಚಿತ್ರಗಳು
ಡಾ. ಬಿ.ಜಯಶ್ರೀ ಅವರ ಸಂಗ್ರಹದಿಂದ
ವಾರ್ತಾ ಮತ್ತು ಸಾರ್ವಜನಿಕ ಇಲಾಖೆ
ಪ್ರಗತಿ ಅಶ್ವತ್ಥನಾರಾಯಣ
ಭವಾನಿ ಲಕ್ಷ್ಮೀನಾರಾಯಣ
ವಿ.ಜೆ. ಪೃಥ್ವಿ

Information Collection-Written by
J.P. Kolar, Shashidhar Bharighat

ಮಾಹಿತಿ ಸಂಗ್ರಹ-ಬರಹ
ಜೆ.ಪಿ. ಕೋಲಾರ, ಶಶಿಧರ ಭಾರಿಘಾಟ್

Printed by
**ILA Mudrana**
No. 36, 40 Feet Road
Raghavanagar,
New Timberyard Layout
Bengaluru - 560 026
Phone : 26757159

ಮುದ್ರಕರು
**ಇಳಾ ಮುದ್ರಣ**
ನಂ. 36, 40 ಅಡಿ ರಸ್ತೆ
ರಾಘವನಗರ
ನ್ಯೂ ಟಿಂಬರ್‌ಯಾರ್ಡ್ ಲೇ ಔಟ್
ಬೆಂಗಳೂರು-560 026
ದೂರವಾಣಿ : 26757159



# ಮುನ್ನುಡಿ

ಶ್ರೀಮತಿ ಬಿ. ಜಯಮ್ಮ ಅವರು ಕನ್ನಡ ನಾಡಿನ ಬೆಳ್ಳಿತೆರೆಯ ಬಂಗಾರದ ತಾರೆ. ಕನ್ನಡ ನಾಡಿನ ಚಲನಚಿತ್ರ ರಂಗಕ್ಕೆ ಬಹುಮೂಲ್ಯ ಕಲಾವಿದರನ್ನು ಕಾಣಿಕೆಯಾಗಿತ್ತ ಗುಬ್ಬಿ ಕಂಪನಿಯ ಮಾಲೀಕರಾದ ಗುಬ್ಬಿ ವೀರಣ್ಣ ಅವರ ಜೀವನ ಸಂಗಾತಿ. ಬಾಲ್ಯದಿಂದಲೇ ರಂಗಭೂಮಿಯ ಬಣ್ಣದ ಲೋಕಕ್ಕೆ ಕಾಲಿಟ್ಟ ಬಿ. ಜಯಮ್ಮನವರು ಹಲವು ಪ್ರಮುಖ ಪಾತ್ರಗಳಲ್ಲಿ ಜನಮನದಲ್ಲಿ ಭದ್ರವಾಗಿ ನೆಲೆಯೂರಿ ರಂಗಭೂಮಿಯಲ್ಲಿ ಚಿರಸ್ಥಾಯಿಯಾದರು.

ಮೂಕಿ ಚಿತ್ರಗಳ ಕಾಲದ ಚಿತ್ರರಂಗದಲ್ಲಿ ಪ್ರವೇಶಿಸಿದ ಬಿ. ಜಯಮ್ಮನವರು. ಮುಂದೆ ಕನ್ನಡ, ತೆಲುಗು ಮತ್ತು ತಮಿಳು ಚಲಚಿತ್ರಗಳಲ್ಲಿ ನಾಯಕಿಯಾಗಿ ಪಾತ್ರವಹಿಸಿದ್ದಾರೆ. ಸ್ವತಃ ನಟರೇ ಗಾಯಕರಾಗಿರಬೇಕಾದ ಅಪೂರ್ವ ಕಾಲಘಟ್ಟದಲ್ಲಿ ಚಲಚಿತ್ರಗಳಲ್ಲಿ ಗಾಯಕಿಯಾಗಿಯೂ, ನಾಯಕಿಯಾಗಿಯೂ ಜನಮನ ಗೆದ್ದವರು ಬಿ. ಜಯಮ್ಮ ಅವರು.

೧೯೧೫ರ ನವೆಂಬರ್ ೨೮ರಂದು ಮಲೆನಾಡಿನ ಸೆರಗು ಚಿಕ್ಕಮಗಳೂರಿನಲ್ಲಿ ಜನಿಸಿದ ಬಿ. ಜಯಮ್ಮನವರು ನಮ್ಮ ಕನ್ನಡ ರಂಗಭೂಮಿ ಮತ್ತು ಚಲನಚಿತ್ರ ರಂಗಗಳಲ್ಲಿ ಅಚ್ಚಳಿಯದ ಛಾಪು ಮೂಡಿಸಿದ್ದಾರೆ. ಅವರ ಜೀವನ ಮತ್ತು ಸಾಧನೆಯ ಈ ಶತಮಾನದ ಅವಲೋಕನ ಮತ್ತು ಅವರ ಸಾಧನೆಗಳ ನೆನಪಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಹೊತ್ತಗೆಯನ್ನು ಪ್ರಕಟಿಸಲಾಗತ್ತಿದೆ. ಮತ್ತು ಅವರ ಜನ್ಮ ಶತಮಾನೋತ್ಸವ ಕಾರ್ಯಕ್ರಮಗಳನ್ನು ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದೆ. ಇಂತಹ ಹಿರಿಯರ ನೆನಪಿನಲ್ಲಿ ಕಾರ್ಯಕ್ರಮಗಳ ಭಾಗವಾಗಿರುವುದು ನನ್ನ ಸೌಭಾಗ್ಯವೆಂದು ಭಾವಿಸುತ್ತೇನೆ.

ಶುಭಾಕಾಂಕ್ಷೆಗಳೊಂದಿಗೆ,

**(ಉಮಾಶ್ರೀ )**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ,
ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವರು

# ಪ್ರಕಾಶಕರ ನುಡಿ



ಕನ್ನಡ ಸಂಸ್ಕೃತಿಗೆ ರಂಗಭೂಮಿ ಮತ್ತು ಚಿತ್ರರಂಗ ನೀಡಿರುವ ಕೊಡುಗೆ ಅಪಾರ. ಬೆಳ್ಳಿತೆರೆಯ ಮೇಲಿನಿಂದ ಬಂದ ಹಲವು ನಾಯಕರು ನಾಡಿನ ಸಂಸ್ಕೃತಿಯ ಪ್ರತೀಕದಂತೆ ಕಂಡಿದ್ದಾರೆ. ಅಂತಹ ಪ್ರತೀಕಗಳಲ್ಲೊಬ್ಬರಾದ ಕರ್ನಾಟಕ ರತ್ನ ಡಾ. ರಾಜ್‌ಕುಮಾರ್ ಅವರು ತಮ್ಮ ಜೀವನದ ಬಾಲ್ಯದಿಂದಲೂ ನಟನೆಯ ಒಳನೋಟಗಳನ್ನು ಪಡೆದಿದ್ದು, ಗುಬ್ಬಿ ನಾಟಕ ಕಂಪನಿಯಲ್ಲಿ. ಗುಬ್ಬಿ ನಾಟಕ ಕಂಪನಿ ನಾಟಕ ಮತ್ತು ಚಲನಚಿತ್ರ ರಂಗಗಳೆರಡರಲ್ಲೂ ಅತ್ಯಂತ ಸ್ಥಿರವಾದ ಸಾಂಸ್ಕೃತಿಕ ಅಭ್ಯುದಯ ಕಾರ್ಯಗಳನ್ನು ಕೈಗೊಂಡಿದೆ.

ಗುಬ್ಬಿ ವೀರಣ್ಣ ಅವರು ತಮ್ಮ ಪರಿಶ್ರಮ ಮತ್ತು ಕಳಕಳಿಯ ಫಲವಾಗಿ ಮುನ್ನಡೆಸಿದ್ದು ಗುಬ್ಬಿ ಕಂಪೆನಿ. ಆ ಕಂಪೆನಿಯ ಖ್ಯಾತ ರಂಗತಾರೆಯಾಗಿ, ಗುಬ್ಬಿ ವೀರಣ್ಣನವರ ಬಾಳ ಸಂಗಾತಿಯಾಗಿ ಜನಪ್ರಿಯ ಸಂಗೀತಗಾರ್ತಿಯಾಗಿ ಗುಬ್ಬಿ ಕಂಪೆನಿಯ ಹೆಸರನ್ನು ಇನ್ನಷ್ಟು ಉಜ್ವಲಗೊಳಿಸಿದವರು ಶ್ರೀಮತಿ ಜಯಮ್ಮ.

ಚಲನಚಿತ್ರ ರಂಗದಲ್ಲಿ ಮೂಕಿ ಚಿತ್ರಗಳ ಮೂಲಕ ಬೆಳ್ಳಿತೆರೆಗೆ ಅಡಿಯನಿಟ್ಟ ಜಯಮ್ಮ ಅವರು ನಂತರ ಕನ್ನಡ, ತೆಲುಗು ಮತ್ತು ತಮಿಳು ಚಲನಚಿತ್ರ ರಂಗಗಳಲ್ಲಿ ನಾಯಕಿಯಾಗಿಯೂ, ಗಾಯಕಿಯಾಗಿಯೂ ತಮ್ಮ ಛಾಪನ್ನು ಮೂಡಿಸಿದವರು. ಅವರ ಪಾತ್ರಗಳ ನೆನಪು ಇಂದಿಗೂ ಗುಬ್ಬಿ ಕಂಪೆನಿಯ ನಾಟಕಗಳನ್ನು ನೋಡಿದವರ ಮನಗಳಲ್ಲಿ ಅಚ್ಚಳಿಯದೆ ಉಳಿದಿದೆ.

ಶ್ರೀಮತಿ ಬಿ. ಜಯಮ್ಮ ಅವರ ಜನ್ಮ ಶತಮಾನೋತ್ಸವ ಆಚರಣೆಗೆ ಸರ್ಕಾರವು ತೀರ್ಮಾನಿಸಿದ್ದು, ಅದರಂತೆ ಹಲವು ಅರ್ಥಪೂರ್ಣ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನ ಮಾಡಲಾಗುತ್ತಿದೆ. ಅವರ ಬದುಕು ಮತ್ತು ಸಾಧನೆಗಳನ್ನು ಆಸಕ್ತರಿಗೆ ಪರಿಚಯಿಸುವ ಸಲುವಾಗಿ ಈ ಚಿತ್ರಲೇಖ ಸಂಪುಟವನ್ನು ಈ ಸುಸಂದರ್ಭದಲ್ಲಿ ಕನ್ನಡಿಗರ ಕೈಗಿಡಲು ಹರ್ಷವೆನಿಸುತ್ತದೆ

**(ಕೆ.ಎ.ದಯಾನಂದ),** ಕ.ಆ.ಸೇ

ನಿರ್ದೇಶಕರು

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಬಿ. ಜಯಮ್ಮನವರು ಕನ್ನಡ ರಂಗಭೂಮಿ,
ಚಲನಚಿತ್ರ ರಂಗ ಕಂಡ ಅಪರೂಪದ
ರಂಗನಾಯಕಿ, ಅವರು ರಂಗಭೂಮಿಗೆ,
ಚಲನಚಿತ್ರ ರಂಗ ಹಾಗೂ ಸಂಗೀತ
ಕ್ಷೇತ್ರಕ್ಕೆ ನೀಡಿದ ಅನನ್ಯ ಕೊಡುಗೆಯನ್ನು
ನೆನೆಯುವುದು ಕನ್ನಡಿಗರ ಆದ್ಯ ಕರ್ತವ್ಯ.

ಜಿ.ಎಚ್. ವೀರಣ್ಣ - ಬಿ.ಜಯಮ್ಮ ದಂಪತಿ





# ಬಿ.ಜಯಮ್ಮ

## ರಂಗತಾರೆ

ಕನ್ನಡವೃತ್ತಿರಂಗಭೂಮಿ ಹಾಗೂ ಕನ್ನಡ ಚಲನ ಚಿತ್ರರಂಗ, ಈ ಎರಡರಲ್ಲೂ ಚಿರಸ್ಥಾಯಿಯಾಗಿ ಉಳಿದಿರುವ ಹೆಸರುಗಳಲ್ಲಿ ಬಿ. ಜಯಮ್ಮ ಅವರೂ ಒಬ್ಬರು.

ರಂಗದ ಮೇಲೆ ಅಭಿನಯ, ತೆರೆಯ ಮೇಲೆ ನಟನೆ ಜೊತೆಗೆ ಕಚೇರಿಗಳಲ್ಲಿ ಸುಶ್ರಾವ್ಯವಾದ ಗಾಯನ ಬಿ. ಜಯಮ್ಮನವರ ಮತ್ತೊಂದು ಪ್ರತಿಭೆ.

ಪೊಲೀಸ್ ಇನ್ಸ್‌ಪೆಕ್ಟರ್ ಟಿ.ಎನ್. ಮಲ್ಲಪ್ಪ ಹಾಗೂ ಕಮಲಮ್ಮ ಇವರ ಪುತ್ರಿಯಾಗಿ ಜಯಮ್ಮನವರು ೨೬ ನವೆಂಬರ್ ೧೯೧೫ರಂದು ಜನಿಸಿದ್ದು ಬೆಂಗಳೂರಿನಲ್ಲಿ.

ಚಿಕ್ಕಂದಿನಲ್ಲಿಯೇ ಚೂಟಿಯಾಗಿದ್ದ ಜಯಮ್ಮ ಅಕ್ಷರಾಭ್ಯಾಸ ಆರಂಭಿಸಿದ್ದು ಬೆಂಗಳೂರಿನ ಬಳೇಪೇಟೆ ಸರ್ಕಾರಿ ಶಾಲೆಯಲ್ಲಿ. ಪೊಲೀಸ್ ಅಧಿಕಾರಿಯಾಗಿದ್ದ ಮಲ್ಲಪ್ಪನವರಿಗೆ ಮಗಳನ್ನು ವೈದ್ಯೆಯನ್ನಾಗಿ ಮಾಡುವ ಆಸೆ. ಆದರೆ ಪುಟ್ಟಬಾಲೆ ಜಯಮ್ಮನ ಮೇಲೆ ಪ್ರಭಾವ ಬೀರಿದ್ದು ಆಕೆಯ ತಾಯಿ ತವರು ಮನೆಯಲ್ಲಿದ್ದ ಸಾಂಸ್ಕೃತಿಕ ವಾತಾವರಣ.

ಅಜ್ಜಿ ಮನೆಯಲ್ಲಿ ಬಹುತೇಕ ಎಲ್ಲರೂ ರಂಗಭೂಮಿ ಹಾಗೂ ಸಂಗೀತ ಕ್ಷೇತ್ರದ ಸಂಪರ್ಕವಿದ್ದವರು. ಇವರ ದೊಡ್ಡಮ್ಮ ಬಿ. ಸುಂದರಮ್ಮ ಆ ಕಾಲಕ್ಕೆ ಹೆಸರಾಂತ ಕಲಾವಿದೆ. ನಾಟಕ ನೋಡುವುದೇ ಮಹಿಳೆಯರಿಗೆ ಅಸಾಧ್ಯವಾದ ಅಂತಹ ದಿನಗಳಲ್ಲಿ ಜಯಮ್ಮನವರ ತಾಯಿ ಕಮಲಮ್ಮನವರ ಅಕ್ಕಂದಿರೆಲ್ಲರೂ

(ಸುಂದರಮ್ಮ, ಕಿಟ್ಟಮ್ಮ ಮತ್ತು ರುದ್ರಮ್ಮ) ಸಂಗೀತ–ನಾಟಕ ಕಲೆಯಲ್ಲಿ ನಿರತರಾಗಿದ್ದರು. ಶಾಲೆಯಲ್ಲಿ ನಡೆಯುತ್ತಿದ್ದ ಪಾಠಗಳಿಗಿಂತ ಹೇಳಿಕೊಡುತ್ತಿದ್ದ ಸಂಗೀತ–ನೃತ್ಯ ತರಗತಿಗಳಲ್ಲಿ ಜಯಮ್ಮನವರಿಗೆ ಹೆಚ್ಚಿನ ಒಲವು ಇರುವುದನ್ನು ಉಪಾಧ್ಯಾಯ ಬಳಗದವರು ಗುರ್ತಿಸಿದರೂ ತಂದೆಯವರ ದೆಸೆಯಿಂದ ಶಾಲೆಗೆ ಹೋಗಿ ಬರುವುದು ಅನಿವಾರ್ಯವಾಗಿತ್ತು ಬಾಲಕಿ ಜಯಮ್ಮನವರಿಗೆ.

ಅವರಿಗೆ ಇನ್ನೂ ಏಳು ವರ್ಷವಿದ್ದಾಗ ಅನಿರೀಕ್ಷಿತ ಆಘಾತವೊಂದು ಎದುರಾಯಿತು. ಅದೆಂದರೆ ತಂದೆ ಮಲ್ಲಪ್ಪನವರ ಅಕಾಲಿಕ ಮರಣ. ಇದಾಗಿದ್ದರಿಂದ ಜಯಮ್ಮನವರ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಕಡಿಮೆಯಾಯಿತು. ಆಗ ಅವರ ಮನಸ್ಸು ಹೆಚ್ಚಿಗೆ ನೆಟ್ಟಿದ್ದು ಸಂಗೀತ–ನಾಟಕ ಚಟುವಟಿಕೆಗಳ ಮೇಲೆ.

ಅಜ್ಜಿಮನೆಯಲ್ಲಿ ಇದ್ದಿಲ ಪುಡಿ, ಗೋಡೆಯ ಸುಣ್ಣವನ್ನೇ ಮುಖಕ್ಕೆ ಬಳಿದುಕೊಂಡು ಕಲಾವಿದೆಯಾಗಿ ತಮಗೆ ಇಷ್ಟ ಬಂದಂತೆ ಕುಣಿದಾಡುವುದಕ್ಕೆ ಜಯಮ್ಮನವರಿಗೆ ಯಾರೂ ಅಡ್ಡಿಪಡಿಸುತ್ತಿರಲಿಲ್ಲ. ಈಗ ಶಾಲೆಗೆ ಹೋಗುವುದಕ್ಕೆ ಅವರಿಗೆ ಹೆಚ್ಚಿನ ಆಸಕ್ತಿ ಇರಲಿಲ್ಲ.


ಆಗ ಜಯಮ್ಮನವರಿಗೆ 9 ವರ್ಷ. ನಾಟಕಗಳ ಬಗೆಗೆ ಕನಸು ಕಾಣಲು ಆರಂಭಿಸಿದ್ದರು. ತಾಯಿ- ಗುರುಗಳ ಸಂಭಾಷಣೆ ಅವರ ಕಿವಿಗೆ ಬಿದ್ದಿತ್ತು. ಕೊನೆಗೆ ನಾಟಕದ ತಾಲೀಮು ಶುರುವಾಯ್ತು.



ಮೂಕಿಚಿತ್ರ : ಹಿಸ್ ಲವ್ ಅಫೇರ್‌ನಲ್ಲಿ ಎಂ.ವಿ. ಸುಬ್ಬಯ್ಯನಾಯ್ಡು ಅವರೊಂದಿಗೆ ಬಿ. ಜಯಮ್ಮ



'ಸದಾರಮೆ' ನಾಟಕದಲ್ಲಿ ಕಳ್ಳನಾಗಿ ವೀರಣ್ಣ, ಸದಾರಮೆಯಾಗಿ ಜಯಮ್ಮ



ವಿಧಾನ ಪರಿಷತ್‌ಗೆ ನಾಮಕರಣಗೊಂಡ ಸಂದರ್ಭದಲ್ಲಿ ಆಗಿನ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ ಮತ್ತಿತರರೊಂದಿಗೆ ಜಿ.ಎಚ್. ವೀರಣ್ಣ

ಮನೆಗೆ ಯಾರಾದರು ನಾಟಕದವರು ಬಂದರೆ ಅವರನ್ನೇ ನೋಡುತ್ತ – ಅವರ ಮಾತುಗಳಲ್ಲೇ ತಲ್ಲೀನರಾಗಿ ಶಾಲೆಗೆ ಹೋಗುತ್ತಿರಲಿಲ್ಲ ಜಯಮ್ಮನವರು. ಅಷ್ಟೊತ್ತಿಗೆ ಮಗಳನ್ನು ಡಾಕ್ಟರ್ ಮಾಡುವ ಆಕಾಂಕ್ಷೆ ಇದ್ದ ಮಲ್ಲಪ್ಪನವರೂ ಜೀವಂತವಾಗಿರಲಿಲ್ಲ.


ಶಾಲೆಯಲ್ಲಿ ನಾಟಕ ವಿಷಯವನ್ನು ಹೇಳಿ ಚಿಕ್ಕ ಪುಟ್ಟ ನಾಟಕಗಳನ್ನು ಮಕ್ಕಳಿಗೆ ಹೇಳಿಕೊಡುತ್ತಿದ್ದ ಶಿಕ್ಷಕ ರಾಮಣ್ಣ ಇವರ ಕುಟುಂಬ ಸ್ನೇಹಿತರು. ಅವರೊಂದು ನಾಟಕ ಸಂಸ್ಥೆಯೊಂದಿಗೆ ನಿಕಟ ಸಂಪರ್ಕ ಹೊಂದಿದ್ದರು. ಅದು ಬೆಂಗಳೂರಿನಲ್ಲಿ ನೆಲೆಗೊಂಡಿದ್ದ "ರಸಿಕ ಜನಾನಂದ ನಾಟಕ ಸಭಾ". ಆಗಾಗ ನಾಟಕಗಳನ್ನು ಪ್ರದರ್ಶಿಸುವುದು ನಾಟಕ ಸಭಾದ ರೂಢಿ.

ಆ ವೇಳೆಗಾಗಲೇ ಜಯಮ್ಮ ತನ್ನ ಗೆಳತಿಯರೊಂದಿಗೆ ಬಿಡುವಿದ್ದಾಗ ಮನೆಯಲ್ಲಿ ಬೆಡ್‌ಷೀಟ್, ಜಮಖಾನಗಳನ್ನೇ ರಂಗ ಮಂಟಪದಂತೆ ಕಟ್ಟಿ ಅದರಲ್ಲಿ ಅಮ್ಮ ಹೇಳಿಕೊಟ್ಟಿದ್ದ ದೇವರ ನಾಮಗಳನ್ನೇ ಹಾಡಿ ಕುಣಿಯುತ್ತಿದ್ದರು. ಇವರೆಲ್ಲರಿಗೆ ಶಾಲೆಯಲ್ಲಿ ಮರಿಯಮ್ಮ ಟೀಚರ್ ಹೇಳಿಕೊಡುತ್ತಿದ್ದ ಹಾಡುಗಳೂ ಮನೆ ರಂಗ ಶಾಲೆಯಲ್ಲಿ ಉಪಯೋಗಕ್ಕೆ ಬರುತ್ತಿದ್ದವು.

ಕಮಲಮ್ಮನವರ ಒಳ ಮನಸ್ಸು ಮಗಳು ಜಯಮ್ಮನಿಗೆ ನಿಜವಾಗಲೂ ಇದ್ದ ಆಸಕ್ತಿಯನ್ನು ಗಮನಿಸಿತ್ತು. ತಮ್ಮ ತೌರಿನಲ್ಲಿದ್ದ ಪರಿಸ್ಥಿತಿಯೂ ಗೊತ್ತಿತ್ತು. ಒಮ್ಮೆ ಶಾಮಣ್ಣ ಮೇಷ್ಟ್ರು ರಂಗಾಸಕ್ತರೊಂದಿಗೆ ಯಾವುದೇ ಕೆಲಸಕ್ಕೆ ಮನೆಗೆ ಬಂದಾಗ ಮಗಳ ಒಲವಿನ ಬಗ್ಗೆ ಹೇಳಿದರು. ಶಾಲೆಯಲ್ಲಿ ಜಯಮ್ಮನಿಗೆ ಪಠ್ಯಕ್ಕಿಂತ – ನೃತ್ಯ ಸಂಗೀತದಲ್ಲಿ ಆಸಕ್ತಿ ತೋರುವುದನ್ನು ಮೇಷ್ಟ್ರು ಗಮನಿಸಿದ್ದರು.

"

ಜಯಮ್ಮನವರ ನೈಜ ಪ್ರತಿಭೆ ಅನಾವರಣಗೊಂಡಿದ್ದು ಬಾಳು ಬಸವೇಗೌಡರ ನಾಟಕ ಕಂಪನಿಯಲ್ಲಿ. ಆಗ ಜಯಮ್ಮನವರಿಗೆ ಹದಿಮೂರು ವರ್ಷ. ಇಲ್ಲಿ ಸಿಕ್ಕ ಉಪನಾಯಕಿ ಪಾತ್ರಗಳು ಜಯಮ್ಮನವರಿಗೆ ವೃತ್ತಿರಂಗಭೂಮಿಯಲ್ಲಿ ಹೆಸರು ತಂದುಕೊಟ್ಟವು. ಗುಲೇಬಕಾವಲಿ ನಾಟಕದಲ್ಲಿ ಚಿತ್ರತಾರೆ ಪಾತ್ರದಿಂದ ನಾಟಕಾಸಕ್ತರ ಗಮನ ಸೆಳೆದರು ಜಯಮ್ಮ



ಸುಭದ್ರಾ ಚಿತ್ರದಲ್ಲಿ ಬಿ. ಜಯಮ್ಮ, ಎಂ.ವಿ. ಸುಬ್ಬಯ್ಯನಾಯ್ಡು

ಜಯಮ್ಮನವರ ಅಮ್ಮನ ಮಾತುಗಳು ಪ್ರತಿಕ್ರಿಯೆಯಾಗಿ 'ರಸಿಕ ಜನಾನಂದ ನಾಟಕ ಸಭಾ' ಸಧ್ಯದಲ್ಲೇ 'ಸೀತಾ ಕಲ್ಯಾಣ' ಅಭಿನಯಿಸುವ ವಿಚಾರ ಹೇಳಿ ಅದರಲ್ಲಿ ನಿಮ್ಮ ಮಗಳೇ ಸೀತೆ ಪಾತ್ರ ನಿರ್ವಹಿಸಲಿ ಎಂದರು.

ಆಗ ಜಯಮ್ಮನವರಿಗೆ ೯ ವರ್ಷ. ನಾಟಕಗಳ ಬಗೆಗೆ ಕನಸು ಕಾಣಲು ಆರಂಭಿಸಿದ್ದರು. ತಾಯಿ–ಗುರುಗಳ ಸಂಭಾಷಣೆ ಅವರ ಕಿವಿಗೆ ಬಿದ್ದಿತ್ತು. ಕೊನೆಗೆ ನಾಟಕದ ತಾಲೀಮು ಶುರುವಾಯ್ತು. ರಾಮನ ಪಾತ್ರಕ್ಕೆ ಗುಬ್ಬಿ ಕಂಪನಿಯ ಕಲಾವಿದ ನಾರಾಯಣರಾಯರು ಗೊತ್ತಾದರು.

ಒಂದೆರಡು ದಿನಗಳ ಬಳಿಕ ತಾಲೀಮು ಸ್ಥಳಕ್ಕೆ ಬರಲು ಜಯಮ್ಮನವರಿಗೆ ಕರೆ ಬಂದಿದ್ದೇ ತಡ ಕುಣಿಯುತ್ತ ಅಲ್ಲಿಗೆ ಹೋದರು ಅವರು. ಪಾತ್ರಧಾರಿಗಳೆಲ್ಲಾ ಅಲ್ಲಿ ಸೇರಿದ್ದರು. ತಮಗೆ ಒಪ್ಪಿಸಿದ ಸಂಭಾಷಣೆಯನ್ನು ಕೆಲವರು ಹೇಳಿದರು. ಇನ್ನೂ ಕೆಲವರು ಹಾಡಿದರು. ಅಭಿನಯ ಹೇಗೆ ಮಾಡಬೇಕೆಂದು ಮಾತುಗಳಾದವು.

ಜಯಮ್ಮನವರ ನೈಜ ಪ್ರತಿಭೆ ಅನಾವರಣಗೊಂಡಿದ್ದು ಬಾಳು ಬಸವೇಗೌಡರ ನಾಟಕ ಕಂಪನಿಯಲ್ಲಿ. ಆಗ ಜಯಮ್ಮನವರಿಗೆ ಹದಿಮೂರು ವರ್ಷ. ಇಲ್ಲಿ ಸಿಕ್ಕ ಉಪನಾಯಕಿ ಪಾತ್ರಗಳು ಜಯಮ್ಮನವರಿಗೆ ವೃತ್ತಿರಂಗಭೂಮಿಯಲ್ಲಿ ಹೆಸರು ತಂದುಕೊಟ್ಟವು. ಗುಲೇಬಕಾವಲಿ ನಾಟಕದಲ್ಲಿ ಚಿತ್ರತಾರೆ ಪಾತ್ರದಿಂದ ನಾಟಕಾಸಕ್ತರ ಗಮನ ಸೆಳೆದರು ಜಯಮ್ಮ.

ತಾಲೀಮಿಗೆ ಬಂದಿದ್ದ ಜಯಮ್ಮನಿಗೆ ಯಾರೂ ಏನೂ ಹೇಳಲಿಲ್ಲ. ಹೇಳಿಕೊಡಲೂ ಇಲ್ಲ. ಅಷ್ಟೊತ್ತು ಸುಮ್ಮನಿದ್ದ ಬಾಲಕಿ ಜಯಮ್ಮ ಧೈರ್ಯವಾಗಿ ಗುರು ಶಾಮಣ್ಣನವರನ್ನು ಕೇಳಿಯೇ ಬಿಟ್ಟರು. "ನನಗ್ಯಾಕೆ ಏನೂ ಹೇಳಿಕೊಡುತ್ತಿಲ್ಲವೆಂದು."

ಜಯಮ್ಮನವರ ಆತುರವನ್ನು ಅಂದಾಜು ಮಾಡಿದ್ದ ಶಾಮಣ್ಣ ತಣ್ಣಗೆ ನಸುನಗುತ್ತ "ನಾಳೆ ನಿನಗೂ ಹೇಳಿ ಕೊಡುತ್ತೇನೆ" ಎಂದರು.

ನಾಳೆ ನಾಟಕ ಪ್ರದರ್ಶನ ಏರ್ಪಾಡಾಗಿದ್ದು ಜಯಮ್ಮನವರಿಗೆ ಗೊತ್ತಿತ್ತು. ತಾಲೀಮು ಏನು ಇಲ್ಲದೆ ಅಭಿನಯಿಸುವುದು ಹೇಗೆ ಎಂಬ ಪ್ರಶ್ನೆ ಅವರನ್ನು ಕಾಡುತ್ತಿತ್ತು. ನಾಳೆ ಏನಾಗುವುದೋ ಎಂಬ ಆತಂಕದಲ್ಲಿ ಜಯಮ್ಮನವರಿಗೆ ರಾತ್ರಿ ನಿದ್ದೆಯೇ ಬರಲಿಲ್ಲ.

ಜಯಮ್ಮನವರನ್ನು ನೇರವಾಗಿ ರಂಗಮಂದಿರಕ್ಕೆ ಕರೆದೊಯ್ದಾಗ ಅವರಿಗೆ ಗಲಿಬಿಲಿ. ಗ್ರೀನ್ ರೂಂನಲ್ಲಿ ಜಯಮ್ಮನವರಿಗೆ ಮೇಕಪ್ ಮಾಡಿದಾಗಲಂತೂ ಇವರಲ್ಲಿ ಭಯ ಇನ್ನೂ ಜಾಸ್ತಿಯಾಯ್ತು. ಒಳ್ಳೆಯ ಉಡುಗೆ ತೊಡುಗೆಗಳನ್ನು ಈಕೆಗೆ ಕೊಟ್ಟಾಗ 'ನನ್ನಾಸೆ



ಚಿಮನ ನಾಟಕ ಚಿತ್ರದಲ್ಲಿ ಕೆಂಪರಾಜ ಅರಸು ಹಾಗೂ ಬಿ.ಜಯಮ್ಮ



ಹೇಮರೆಡ್ಡಿ ಮಲ್ಲಮ್ಮ ಚಿತ್ರದಲ್ಲಿ ಮಲ್ಲಮ್ಮನಾಗಿ ಜಯಮ್ಮ


ಇಂದು ಈಡೇರುತ್ತದೆ' ಎಂದುಕೊಂಡರು. ಒಡವೆಗಳ ಅಲಂಕಾರದ ನಂತರ ತಲೆಯ ಮೇಲೆ ಝಗಮಗಿಸುವ ಕಿರೀಟವೂ ಬಂದಾಗ ಜಯಮ್ಮನವರ ಸಂತೋಷಕ್ಕೆ ಪಾರವೇ ಇರಲಿಲ್ಲ.

ನಾಟಕ ಶುರುವಾಗುವ ವೇಳೆಗೆ ಮನೆ ಮಂದಿಯೆಲ್ಲಾ ಜಯಮ್ಮನ ಅಭಿನಯ ನೋಡಲು ರಂಗ ಮಂದಿರಕ್ಕೆ ಬಂದಿದ್ದರು. ಶಾಮಣ್ಣ ಮೇಷ್ಟ್ರು ಗಡಿಬಿಡಿಯಿಂದ ಓಡಾಡುತ್ತಿದ್ದರು. ಸಹಪಾಠಿಗಳೂ ನೆರೆದಿದ್ದರು. ಅವರೆಲ್ಲ ಕಾತುರವಾಗಿ ಕಾಯುತ್ತಿದ್ದಾರೆಂಬುದನ್ನು ಜಯಮ್ಮನವರಿಗೆ ಯಾರೂ ಹೇಳಬೇಕಿರಲಿಲ್ಲ. ಆದರೆ ಸಂಪೂರ್ಣ ಮೇಕಪ್‌ನಲ್ಲಿದ್ದ ಜಯಮ್ಮನವರಿಗೆ ಒಂದು ಅಳುಕಿತ್ತು "ಅದು ರಂಗದ ಮೇಲೆ ತನ್ನ ಕರ್ತವ್ಯ ಏನು? ಎಂಬುದು. ಕುಟುಂಬ ಸ್ನೇಹಿತರಾದ ಗಿರಿರಾಯರು ಸೈಡ್‌ವಿಂಗ್‌ನಲ್ಲಿ ಕಾಣಿಸಿಕೊಂಡು ಜಯಮ್ಮನ ಕೈಗೆ ಹೂ ಹಾರ ಕೊಟ್ಟವರೆ "ನೋಡಮ್ಮ ನೀನು ಸ್ಟೇಜ್ ಮೇಲೆ ಹೋಗಿ ಶ್ರೀರಾಮಚಂದ್ರನಿಗೆ ಹಾರ ಹಾಕಿ ನಮಸ್ಕರಿಸಿ

ವಾಪಸ್ಸು ಬಂದು ಬಿಡಮ್ಮ" ಎಂದರು. ಹೇಳಿದ ಕೆಲಸವನ್ನು ಜಯಮ್ಮ ಸಮರ್ಥವಾಗಿ ನಿರ್ವಹಿಸಿದರು. ತರಬೇತಿ ಇಲ್ಲದೆ ಒಂದು ಸಂಭಾಷಣೆ ಹೇಳದೆ, 'ಸೀತಾಕಲ್ಯಾಣ' ನಾಟಕದಲ್ಲಿ ಸೀತೆ ಪಾತ್ರಧಾರಿಯಾಗಿ ಶ್ರೀರಾಮಚಂದ್ರನಿಗೆ ರಂಗಸ್ಥಳದಲ್ಲಿ ಪುಷ್ಪಮಾಲೆ ಹಾಕಿ ಸೈಡ್‌ವಿಂಗ್‌ಗೆ ಹಿಂದಿರುಗಿ ಬಂದ ಜಯಮ್ಮನವರಿಗೆ ಮತ್ತೆಂದೂ ಹಿಂದೆ ನೋಡುವ ಅವಕಾಶವೇ ಒದಗಲಿಲ್ಲ. ಮುಂದೆ ಅವರು ನಡೆದಿದ್ದೆಲ್ಲಾ ಯಶಸ್ಸಿನ ಹಾದಿ.

ರಂಗಪ್ರವೇಶ ಮಾಡಿದ್ದ ಜಯಮ್ಮನವರಿಗೆ 'ರಸಿಕ ಜನಾನಂದ ನಾಟಕ ಸಭಾ'ದ ಇನ್ನೊಂದು ಪ್ರಯೋಗ 'ಮಹಾಕವಿ ಕಾಳಿದಾಸ' ನಾಟಕದಲ್ಲೂ ಅವಕಾಶ ಸಿಕ್ಕಿತು. ಇದು ಸಂಗೀತ ಪ್ರಧಾನ ನಾಟಕ – ತರಬೇತುದಾರರಾದ ಸುಂದರರಾಯರು ಒಂದೆರಡು ಹಾಡುಗಳನ್ನು ಜೊತೆಗೆ ಪುಟ್ಟ ಪುಟ್ಟ ಸಂಭಾಷಣೆಗಳನ್ನು ಜಯಮ್ಮನವರಿಗೆ ಹೇಳಿಕೊಟ್ಟರು.

ರಾಜ್‌ಕುಮಾರ್-ಬಿ.ಜಯಮ್ಮ ಚಿತ್ರ



ರಾಜ್‌ಕುಮಾರ್ ಜಯಂತಿ ಅವರೊಂದಿಗೆ ಬಿ.ಜಯಮ್ಮ





> ಅಭಿನಯವನ್ನು ಅರ್ಥ ಮಾಡಿಕೊಳ್ಳುವ ಅನುಭವವಿದ್ದ ಅವರಿಗೆ ಸಂಗೀತದ ರೀತಿ ನೀತಿಗಳ ಆಳ ಅಗಲಗಳ ಪರಿಚಯವಿತ್ತು. ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ಅಭ್ಯಾಸ ಮಾಡಿದ್ದು. ಬಿ. ಜಯಮ್ಮನವರು ಹಲವು ಸಂದರ್ಭಗಳಲ್ಲಿ ಪರಿಪೂರ್ಣ ಕಚೇರಿಗಳನ್ನು ನಡೆಸಿಕೊಟ್ಟಿದ್ದ ಸಂಗೀತ ವಿದುಷಿ.

ಪರದೆ ಏಳುವ ಮೊದಲು ಪ್ರಾರ್ಥನೆ ಮಾಡುವುದು ಜಯಮ್ಮನವರ ಪಾಲಿಗೆ ಬಂತು. ನಾಟಕದಲ್ಲಿ 'ಸಖಿ' ಪಾತ್ರವನ್ನು ಅವರು ಅಭಿನಯಿಸಬೇಕಾಗಿತ್ತು. ಪಾಲಿಗೆ ಬಂದಿದ್ದನ್ನು ಜಯಮ್ಮ ಅಚ್ಚುಕಟ್ಟಾಗಿ ನಿರ್ವಹಿಸಿದರು.

ತಂಗಿ ಮಗಳು ರಂಗಭೂಮಿ ಕಡೆ ವಾಲಿದ್ದನ್ನು ತಿಳಿದಿದ್ದ ದೊಡ್ಡಮ್ಮ ಸುಂದರಮ್ಮ ಆಗಾಗ ಜಯಮ್ಮನನ್ನು ಜೊತೆಗೆ ಕರೆದೊಯ್ಯುತ್ತಿದ್ದರು. ಆ ವೇಳೆಗಾಗಲೇ ಸುಂದರಮ್ಮ ವೃತ್ತಿರಂಗಭೂಮಿಯಲ್ಲಿ ದೊಡ್ಡ ನಟಿ. ಆಗ ಅವರು ಅಭಿನಯಿಸುತ್ತಿದ್ದ ನಾಟಕ ಕಂಪನಿ ಶಾಂತರಾಜಪ್ಪನವರ ಶ್ರೀ ಚೆನ್ನಬಸವೇಶ್ವರ ನಾಟಕ ಮಂಡಲಿ. ನಾಟಕ ಸಂಸ್ಥೆ ಪ್ರದರ್ಶಿಸುತ್ತಿದ್ದ ರಾಮಾಯಣ, ಕಬೀರ್ ಮೊದಲಾದ ನಾಟಕಗಳಲ್ಲಿ ಸುಂದರಮ್ಮ ಆಗಾಗ ಜಯಮ್ಮನಿಗೂ ಅವಕಾಶ ಕಲ್ಪಿಸುವುದನ್ನು ಮರೆಯಲಿಲ್ಲ. ಜಯಮ್ಮ ಅವರ ಆಸೆಗೆ ನೀರೆರೆಯುತ್ತಿದ್ದ ಸುಂದರಮ್ಮ ಬಾಲ ಪಾತ್ರಗಳಾದ ಅಂಗದ–ಕಮಾಲ್ ಇತ್ಯಾದಿಗಳನ್ನು ನಿರ್ವಹಿಸಲು ಅನುವು ಮಾಡಿಕೊಟ್ಟರು.

ಅಕಾಲದಲ್ಲಿ ಅಪ್ಪ ಅಸು ನೀಗಿದ್ದರಿಂದ ಮನೆ ಪರಿಸ್ಥಿತಿಯೂ ಅಂತಹ ಸರಿ ಇರಲಿಲ್ಲವಾದ್ದರಿಂದ ಜಯಮ್ಮ ಸಹೋದರಿ ರಾಜಮ್ಮನೊಂದಿಗೆ ನಾಟಕ ಕಂಪನಿಗೆ ಹೋಗಿ ಬರತೊಡಗಿದವರು. ಕೊನೆಗೆ ದೊಡ್ಡಮ್ಮನ ಆಶ್ರಯದಲ್ಲಿ ಕಂಪನಿಗೆ ಸೇರಿಕೊಂಡರು. ಪ್ರಮುಖ ನಟಿ ಸುಂದರಮ್ಮ ಸೇರಿಕೊಂಡ ನಾಟಕ ಕಂಪನಿಗಳಿಗೆ ಜಯಮ್ಮ ಸಹೋದರಿಯರು ಹೋಗಬೇಕಾದ ಅನಿವಾರ್ಯತೆ ಇತ್ತು. ಆಗೀಗ ಇವರ ಪಾಲಿಗೆ ಸಣ್ಣ ಪುಟ್ಟ ಪಾತ್ರಗಳೂ ಸಿಗುತ್ತಿದ್ದವು.

ಜಯಮ್ಮನವರ ನೈಜ ಪ್ರತಿಭೆ ಅನಾವರಣಗೊಂಡಿದ್ದು ಬಾಳು ಬಸವೇಗೌಡರ ನಾಟಕ ಕಂಪನಿಯಲ್ಲಿ. ಆಗ ಜಯಮ್ಮನವರಿಗೆ ಹದಿಮೂರು ವರ್ಷ. ಇಲ್ಲಿ ಸಿಕ್ಕ ಉಪನಾಯಕಿ ಪಾತ್ರಗಳು ಜಯಮ್ಮನವರಿಗೆ

ವೃತ್ತಿರಂಗಭೂಮಿಯಲ್ಲಿ ಹೆಸರು ತಂದುಕೊಟ್ಟವು. ಗುಲೇಬಕಾವಲಿ ನಾಟಕದಲ್ಲಿ ಚಿತ್ರತಾರೆ ಪಾತ್ರದಿಂದ ನಾಟಕಾಸಕ್ತರ ಗಮನ ಸೆಳೆದರು ಜಯಮ್ಮ.

ಕನ್ನಡ ವೃತ್ತಿರಂಗಭೂಮಿಯಲ್ಲಿ ಮಿನುಗುವ ತಾರೆಗಳನ್ನು ಆ ಸಮಯದಲ್ಲಿ ಆಕರ್ಷಿಸುತ್ತಿದ್ದ ಕಂಪನಿ ವೀರಣ್ಣನವರ ಗುಬ್ಬಿ ಕಂಪನಿ. ಬಹುಮುಖ ಪ್ರತಿಭೆಯ ಗುಬ್ಬಿ ವೀರಣ್ಣನವರಿಗೆ ಬಾಳು ಬಸವೇಗೌಡರ ಕಂಪನಿಯಲ್ಲಿ ಪ್ರದರ್ಶನಗೊಳ್ಳುತ್ತಿದ್ದ 'ಸದಾರಮೆ' ನಾಟಕದ ಚಂಚುಕುಮಾರಿ ಪಾತ್ರಧಾರಿಯ ವಿಶಿಷ್ಟ ಅಭಿನಯದ ವಿಚಾರ ಕಿವಿಗೆ ಬಿತ್ತು. ಪ್ರಸಿದ್ಧ ನಟಿ ಸುಂದರಮ್ಮನವರಿಂದ ಪಳಗಿದ್ದ ಜಯಮ್ಮ ಪ್ರತಿಷ್ಠಿತ ಸಂಸ್ಥೆ ಗುಬ್ಬಿ ಕಂಪನಿಗೆ ೧೯೨೮ರಲ್ಲಿ ಕಾಲಿಟ್ಟರು. ಆಗ ಪ್ರದರ್ಶಿಸಲಾಗುತ್ತಿದ್ದ 'ವೀರ ಸಿಂಹ ಚರಿತ್ರೆ' ನಾಟಕದಲ್ಲಿ ಬಿ.ವಿ. ಗುರುಮೂರ್ತಪ್ಪ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದರು. ಅವರೊಂದಿಗೆ 'ನಟಿ' ಪಾತ್ರ ನಿರ್ವಹಿಸುವ ಹೊಣೆ ಜಯಮ್ಮನವರಿಗೆ ಸಿಕ್ಕಿತು.

ಉದಯಕುಮಾರ್, ಕಲ್ಪನಾ ಅವರೊಂದಿಗೆ ಬಿ. ಜಯಮ್ಮ





ಗುಣಸಾಗರಿ ಚಿತ್ರದಲ್ಲಿ

ಗ್ರಾಮೀಣ ಯುವತಿಯೊಬ್ಬಳು ಪ್ರಖ್ಯಾತ ಚಿತ್ರ ತಾರೆಯಾಗುವ ಕಥಾನಕ ಹೊಂದಿದ್ದ 'ಸ್ವರ್ಗಸೀಮಾ' 1945ರಲ್ಲಿ ತೆರೆಕಂಡಿತು. ಈ ತೆಲುಗು ಚಿತ್ರದ ಮೂಲಕ ಬಿ. ಜಯಮ್ಮ ಅಪಾರ ಹೆಸರು ಗಳಿಸಿದರು.

ಬಿ. ಜಯಮ್ಮನವರಲ್ಲಿ ಅಂತರ್ಗತವಾಗಿದ್ದ ಪ್ರತಿಭೆಗೆ ಅವಕಾಶ ತೆರೆದುಕೊಂಡಿದ್ದ ಗುಬ್ಬಿ ಕಂಪನಿಯಲ್ಲಿ. ಹಾಡು–ನಟಿ ಜಯಮ್ಮ ತಮ್ಮ ಪಾಲಿಗೆ ಬಂದ ಎಲ್ಲಾ ಪಾತ್ರ ತುಂಬುವ ವಿಧಾನ ಎಲ್ಲರಿಗೂ ಮೆಚ್ಚುಗೆಯಾಯಿತು. 'ಮೃಣಾಲಿನಿ' 'ರಾಜಭಕ್ತಿ' ನಾಟಕದಲ್ಲಿ ಜಯಮ್ಮ ಅಭಿನಯಿಸಿದ ಪಾತ್ರ. ಇದು ಗುಬ್ಬಿ ಕಂಪನಿಯ ಜನಪ್ರಿಯ ನಾಟಕ ಕೂಡ. 'ಮೃಣಾಲಿನಿ' ಪಾತ್ರ ಪ್ರವೇಶ ಮಾಡಿದ ಜಯಮ್ಮ ಅದ್ಭುತ ಅಭಿನಯವನ್ನಿತ್ತರು. ಅವರ ವೃತ್ತಿ ಜೀವನದಲ್ಲಿ ಈ ಪಾತ್ರ ಮೈಲಿಗಲ್ಲು.

ದೊಡ್ಡಮ್ಮ ಸುಂದರಮ್ಮನವರಿಂದ ರಂಗಭೂಮಿಯ ಪ್ರಾಥಮಿಕ ಪಾಠಗಳನ್ನು ಕಲಿತಿದ್ದ ಜಯಮ್ಮನವರಿಗೆ ಅಭಿನಯ–ಗಾಯನ– ಸ್ಫುಟ ಮಾತುಗಾರಿಕೆ–ಮೋಹಕ ಧ್ವನಿ ಈ ಎಲ್ಲ ವಿಚಾರಗಳಲ್ಲೂ ಪರಿಣತಿ ದೊರಕಿದ್ದು ಗುಬ್ಬಿ ಕಂಪನಿಯಲ್ಲಿ. ಗುಬ್ಬಿ ವೀರಣ್ಣನವರು, ಹಾರ್ಮೋನಿಯಂ ಮಾಸ್ಟರ್ ದೇವರಾಜಪ್ಪ ನುರಿತ ನಟ ಡಿ. ಜಯರಾಯರು– ಇವರೆಲ್ಲರ ಮಾರ್ಗದರ್ಶನದಿಂದ ಜಯಮ್ಮನವರ ನಟನಾ ಸಾಮರ್ಥ್ಯ ಹೆಚ್ಚಿತು. ವೀರಣ್ಣನವರು ತಮ್ಮ ನಾಟಕಗಳಲ್ಲಿ ಮುಖ್ಯ ಪಾತ್ರಗಳನ್ನು ನೀಡಿ ಬೆಂಬಲಿಸಿದರಲ್ಲದೆ

ಚಿತ್ರರಂಗದ ದಿಗ್ಗಜ ವಿ. ಶಾಂತಾರಾಂ ಅವರಿಗೆ ರಂಗ ದಿಗ್ಗಜ ಗುಬ್ಬಿ ವೀರಣ್ಣನವರಿಂದ ಗೌರವಾರ್ಪಣೆ. ನಟಿ ಜಯಮ್ಮ, ಸಚಿವ ಎಸ್.ಎಂ. ಕೃಷ್ಣ, ಚಲನಚಿತ್ರ ನಿಗಮದ ಕೆಕೆ. ಮೂರ್ತಿ ಅವರೂ ಚಿತ್ರದಲ್ಲಿದ್ದಾರೆ.



ಕನ್ನಡ ಚಲನಚಿತ್ರ ಸುವರ್ಣ ಮಹೋತ್ಸವ ಸಮಾರಂಭದಲ್ಲಿ (1984) ಗಣ್ಯರೊಂದಿಗೆ ಬಿ. ಜಯಮ್ಮ



ಸಮಾರಂಭವೊಂದರಲ್ಲಿ ಬಿ. ಜಯಮ್ಮ, ಸಚಿವ ಕೆ.ಎಚ್. ಶ್ರೀನಿವಾಸ್ ಹಾಗೂ ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ್




ತಮ್ಮ ಕಂಪನಿಯ ಬ್ರಾಂಚ್‌ಗಳಲ್ಲೂ ಅಭಿನಯಿಸಲು ಪ್ರೋತ್ಸಾಹಿಸಿದ್ದರು. ಮುಂದೆ 'ದೇವದಾಸಿ' ಎಂಬ ಹೆಸರಿನಲ್ಲಿ ಪ್ರಸಿದ್ಧವಾದ ನಾಟಕಕ್ಕೆ ಮೊದಲಿದ್ದ ಹೆಸರು 'ಆಶಾಪಾಶ' – ಇದು ಪ್ರಖ್ಯಾತ ನಟ–ನಾಟಕಕಾರ ಕೆ. ಹಿರಣ್ಣಯ್ಯನವರು ಗುಬ್ಬಿ ಕಂಪನಿ ಬ್ರಾಂಚ್‌ಗಾಗಿಯೇ ರಚಿಸಿದ ನಾಟಕ. ಇದು 'ಮಣಿ ಮಂಜರಿ' ಪಾತ್ರಕ್ಕೆ ಒತ್ತು ಕೊಟ್ಟ ನಾಟಕ. ಜಯಮ್ಮ ನೈಜ ಮಣಿಮಂಜರಿಯಂತೆ ಅಭಿನಯಿಸಿದ್ದು ಇಡೀ ರಂಗಭೂಮಿಯ ಗಮನ ಸೆಳೆಯಿತು. ಈ ಪಾತ್ರವನ್ನು ಎಲ್ಲಾ ಮಗ್ಗಲುಗಳಿಂದಲೂ ಹುರಿಗಟ್ಟುವಂತೆ ಮಾಡಿದ್ದು ಜಯಮ್ಮನವರ ಕಲಾ ಕೌಶಲ್ಯ.

ಏರು ಯವ್ವನದ ಜವ್ವನೆ ಮಣಿಮಂಜರಿಯ ಮನಮೋಹಕ ಮೈಮಾಟ, ಕಾಂತಿಯುಕ್ತ ಕಣ್ಣುಗಳ ನೋಟ. ಸಿರಿಕಂಠದ ಗೀತ ಗಾಯನ, ಬಿಂಕ ಬಿನ್ನಾಣದ ನಡೆನುಡಿ. ಸುಮಧುರವಾದ ಸಂಭಾಷಣೆ ಎಲ್ಲಾ ವಿಚಾರಗಳಲ್ಲಿಯೂ ಸಮತೋಲಿತ ಕುಶಲತೆ ಎಲ್ಲವೂ ಬಿ. ಜಯಮ್ಮನವರನ್ನು ಬಹು ಎತ್ತರಕ್ಕೆ ಕೊಂಡೊಯ್ದಿತು. ಅವರು ಅಭಿನಯಿಸುತ್ತಿದ್ದ ಸತ್ಯಭಾಮೆ (ಶ್ರೀ ಕೃಷ್ಣ ಪಾರಿಜಾತ) ರುಕ್ಮಿಣಿ (ರುಕ್ಮಿಣಿ ಕಲ್ಯಾಣ) ಬೃಂದಾದೇವಿ





ಬಿ. ಜಯಮ್ಮನವರಿಂದ ಮುಖ್ಯಮಂತ್ರಿ ಆರ್. ಗುಂಡೂರಾವ್‌ರಿಗೆ ಹಾರ ಅರ್ಪಣೆ



(ಶಿವ ಜಲಂಧರ) ಸಾವಿತ್ರಿ (ಸತಿ ಸಾವಿತ್ರಿ) ಸೀತಾದೇವಿ (ರಾಮಾಯಣ) ಪಾತ್ರಗಳಲ್ಲಿಯೇ ತಾವೊಬ್ಬ ಸಮರ್ಥ ನಟಿ ಎಂಬುದನ್ನು ಸಾಬೀತು ಪಡಿಸಿದ್ದ ಜಯಮ್ಮನವರ ಅಭಿನಯ ಟೋಪಿಗೆ ಗರಿ ಸಿಕ್ಕಿಸಿತು ದೇವದಾಸಿಯ ಮಣಿಮಂಜರಿ ಪಾತ್ರ.

'ಪ್ರೇಮ ಲೀಲ' ಗುಬ್ಬಿ ಕಂಪನಿಯ ಇನ್ನೊಂದು ಹೆಸರಾಂತ ಸಾಮಾಜಿಕ ನಾಟಕ. ಇದು ಯುವ ಜೋಡಿಯ ಅಮೋದ ಪ್ರಮೋದಗಳನ್ನು ರಂಗದ ಮೇಲೆ ಬಿಂಬಿಸುವ ಪ್ರಯತ್ನ. ಇದರಲ್ಲಿ ಜಯಮ್ಮ ನಿರ್ವಹಿಸುತ್ತಿದ್ದ ಪಾತ್ರ ರೋಹಿಣಿಯದು. ಇವರಿಗೆ ಎದುರಾಗಿ ನಟಿಸುತ್ತಿದ್ದ ನಾಯಕ ಇನ್ನೊಬ್ಬ ಪ್ರತಿಭಾವಂತ ಬಿ.ಆರ್. ಪಂತಲು. ಇಬ್ಬರ ಸುಲಲಿತ ಅಭಿನಯ ನೋಡುಗರಿಗೆ ರಂಜನೆ ಮಾತ್ರವಲ್ಲ ಮನೋವಿಕಾಸಕ್ಕೆ ಅವಕಾಶ ಕೊಟ್ಟಿತ್ತು. ನಾಟಕ ರತ್ನ ಗುಬ್ಬಿ ವೀರಣ್ಣನವರ ಮಡದಿಯಾದ ಮೇಲೆ ಬಿ. ಜಯಮ್ಮನವರು ಅಭಿನಯದ ಸಂಗಡ ಕಂಪನಿ ನಿರ್ವಹಣೆಯಲ್ಲೂ ಹೊಣೆ ಹೊರುತ್ತಿದ್ದರು. ಕನ್ನಡ ವೃತ್ತಿ ರಂಗಭೂಮಿಯಲ್ಲಿ ನವನವೀನ ಪ್ರಯೋಗಗಳಿಂದ ಪ್ರೇಕ್ಷಕರನ್ನು ಆಕರ್ಷಿಸುತ್ತಿದ್ದ ಗುಬ್ಬಿ ಕಂಪನಿ ನಾಟಕಗಳಲ್ಲಿ ಚರಿತ್ರೆಯನ್ನೇ ಸೃಷ್ಟಿಸಿದ 'ಕುರುಕ್ಷೇತ್ರ'– ರಂಗಮಂಚದಲ್ಲಿ



ಬಿ. ಜಯಮ್ಮ-ಬಿ.ವಿ. ರಾಧಾ



ಎಂದೂ ಕೇಳರಿಯದಿದ್ದ ಅದ್ಭುತಗಳನ್ನು 'ಕುರುಕ್ಷೇತ್ರ'ಕ್ಕಾಗಿ ಮಾಡಿದರು ವೀರಣ್ಣನವರು. ಈ ನಾಟಕದಲ್ಲಿ ನಾಯಕಿಯಾಗಿ ಅಭಿನಯಿಸಿದರು ಬಿ. ಜಯಮ್ಮ. ಮಹಾಭಾರತ ಮಹಾಕಾವ್ಯದಲ್ಲಿ ಮಹತ್ವದ ಪಾತ್ರಧಾರಿ ದ್ರೌಪದಿಯದು. ಸಂಕಷ್ಟಗಳ ಸುಳಿಯಲ್ಲಿ ಸಿಕ್ಕಿ ತೊಳಲಾಡುವ ಸನ್ನಿವೇಶಗಳಲ್ಲಿ ಮನಮಿಡಿಯುವಂತೆ ಅಭಿನಯವಿತ್ತ ಜಯಮ್ಮನವರು ಪ್ರೇಕ್ಷಕರೊಂದಿಗೆ ಅನುಸಂಧಾನಕ್ಕಿಳಿದರು. ನಾಟಕದಲ್ಲಿ ನೋಡುಗರ ಹಾಸು ಹೊಕ್ಕಾಗುವಂತೆ ಮಾಡಿದ ಜಯಮ್ಮನವರು ಕನ್ನಡ ನಾಡಿನಲ್ಲಿ ಪ್ರಚಂಡ ಯಶಸ್ಸು ಕಂಡ 'ಕುರುಕ್ಷೇತ್ರ' ತೆಲುಗು ಭಾಷೆಗೆ ಅನುವಾದಗೊಂಡು ಪ್ರಯೋಗಗೊಂಡಾಗ ಅಲ್ಲೂ ತಮ್ಮ ಕಲಾ ಪ್ರೌಢಿಮೆಯನ್ನು ಪ್ರದರ್ಶಿಸಿದರು.

ಯಶಸ್ಸಿನ ಉತ್ತುಂಗಕ್ಕೇರಿದ ಗುಬ್ಬಿ ಕಂಪನಿ ಕನ್ನಡ ವೃತ್ತಿ ರಂಗಭೂಮಿಯಲ್ಲಿ ಮೂಡಿಸಿದ ದಾಖಲೆಗಳಲ್ಲಿ 'ದಶಾವತಾರ' ನಾಟಕಕ್ಕೂ ಪ್ರಮುಖ ಸ್ಥಾನವಿದೆ. ಅದ್ದೂರಿತನ ರಂಗಸ್ಥಳದಲ್ಲಿ ಪ್ರತಿಬಿಂಬಿಸಿದ 'ದಶಾವತಾರ' ನಾಟಕ ಪ್ರಯೋಗ ಪ್ರೇಕ್ಷಕರನ್ನು ಮಂತ್ರ ಮುಗ್ಧಗೊಳಿಸಿತು. ರಂಗಸಜ್ಜಿಕೆ, ದೀಪಗಳ ಬಳಕೆ ಚಮತ್ಕಾರದ ಸನ್ನಿವೇಶಗಳು ಹೊಸಬಗೆಯ ಪೋಷಾಕು – ಇವೆಲ್ಲ ಒಟ್ಟಾಗಿ ಮೇಳೈಸಿದ 'ದಶಾವತಾರ' ನಾಟಕದಲ್ಲಿ ಪ್ರಹ್ಲಾದನ ತಾಯಿ ಕಯಾದು ಪಾತ್ರದಲ್ಲಿ ನಿರ್ವಹಿಸಿದರು ಬಿ. ಜಯಮ್ಮ. ಬಿ. ಜಯಮ್ಮನವರದ್ದು ವೃತ್ತಿ ಬದುಕಿನಲ್ಲಿ ಸವಾಲಿನ ಪಾತ್ರವನ್ನು ಸುಲಲಿತವಾಗಿ ನಟಿಸಿದರು. ಅತ್ತ ಪತಿ

– ಇತ್ತ ಹೊಟ್ಟೆಯಲ್ಲಿ ಹುಟ್ಟಿದ ಮಗ. ಕರುಳಬಳ್ಳಿ ಸಂಬಂಧದ ಮಗನಿಗೆ ಕೈಯಾರೆ ವಿಷಕೊಡುವ ಸನ್ನಿವೇಶ 'ದಶಾವತಾರ' ನಾಟಕದ ಮುಖ್ಯ ಘಟ್ಟ. ಇದು ನಾಟಕವೆಂಬುದನ್ನು ಮರೆತು ನೈಜ ಅಭಿನಯವಿತ್ತ ಜಯಮ್ಮನವರು ಪಾತ್ರದಲ್ಲಿ ಲೀನರಾಗಿ ಹೋಗುತ್ತಿದ್ದರು.

'ಮೋಹನ ಶಾಸನೆ' 'ಪುರಂದರದಾಸರು' 'ಅಣ್ಣ–ತಮ್ಮ' 'ಜಗಜ್ಯೋತಿ ಬಸವೇಶ್ವರ' 'ಸದಾರಮೆ' ನಾಟಕಗಳಲ್ಲಿ ಪ್ರಮುಖ ಪಾತ್ರಗಳನ್ನು ಅಭಿನಯಿಸಿದ ಬಿ. ಜಯಮ್ಮನವರ 'ಸದಾರಮೆ' ಪಾತ್ರ ಬಹುಕಾಲ ನೆನಪಿನಲ್ಲಿ ಉಳಿಯುವಂತದ್ದು. ಕಾಣಿಸಿಕೊಳ್ಳುವ ಎಲ್ಲಾ ಪಾತ್ರಗಳನ್ನು ಸಾದ್ಯಂತ ಅರಿತುಕೊಂಡು ಕಥಾ ಸನ್ನಿವೇಶಕ್ಕೆ ತಕ್ಕಂತೆ ಅಭಿನಯಿಸುವ ಚಾಕಚಕ್ಯತೆಯನ್ನು ತಿಳಿದುಕೊಂಡಿದ್ದರು ಬಿ. ಜಯಮ್ಮನವರು.

ಅಭಿನಯವನ್ನು ಅರ್ಥಮಾಡಿಕೊಳ್ಳುವ ಅನುಭವವಿದ್ದ ಅವರಿಗೆ ಸಂಗೀತದ ರೀತಿ ನೀತಿಗಳ ಆಳ ಅಗಲಗಳ ಪರಿಚಯವಿತ್ತು. ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ಅಭ್ಯಾಸ ಮಾಡಿದ್ದು. ಬಿ. ಜಯಮ್ಮನವರು ಹಲವು ಸಂದರ್ಭಗಳಲ್ಲಿ ಪರಿಪೂರ್ಣ ಕಚೇರಿಗಳನ್ನು ನಡೆಸಿಕೊಟ್ಟಿದ್ದ ಸಂಗೀತ ವಿದುಷಿ.

ಕನ್ನಡ ರಂಗಭೂಮಿ ಹಾಗೂ ಸಿನಿಮಾ ಪ್ರಪಂಚದಲ್ಲಿ ಜಿ.ಎಚ್.ವೀರಣ್ಣನವರು ಮಾಡದೇ ಉಳಿದ ಸಾಹಸಗಳೇ ಇಲ್ಲವೆನ್ನಬಹುದು. ಅವರ ಮಡದಿಯಾಗಿ ಜಯಮ್ಮನವರು ಅವರ ಜಾಡಿಯಲ್ಲಿ ಹುರುಪಿನಿಂದ ನಡೆಯುತ್ತಿದ್ದರು. ಆಗ ಬಂತು ನೋಡಿ 'ಬಯೋಸ್ಕೋಪ್'



ಪಂಢರಿಬಾಯಿ, ಬಿ. ಜಯಮ್ಮ, ಎಚ್‌ಎಲ್‌ಎನ್. ಸಿಂಹ, ಹೊನ್ನಪ್ಪ ಭಾಗವತರ್, ಗುಬ್ಬಿವೀರಣ್ಣ, ಮೈನಾವತಿ



ಬಿ. ಜಯಮ್ಮ - ಪತ್ರಕರ್ತ ಎಂ.ವಿ. ರಾಮಕೃಷ್ಣಯ್ಯ







ಹೊಸ ಮಾಧ್ಯಮವನ್ನು ಅನುಷ್ಠಾನಗೊಳಿಸಲು ವೀರಣ್ಣನವರು ಪ್ರತ್ಯೇಕ ಸಂಸ್ಥೆಯನ್ನೇ ಹುಟ್ಟು ಹಾಕಿದರು. ಅದೇ 'ಕರ್ನಾಟಕ ಕಾರ್ಪೋರೇಷನ್' ಅದು ಮೂಕಿ ಸಿನಿಮಾಗಳ ಕಾಲ – ಗುಬ್ಬಿ ವೀರಣ್ಣನವರು ಹಾಲಿವುಡ್ ನಿರ್ದೇಶಕರಿಂದಲೇ ಕನ್ನಡ ನೆಲದಲ್ಲಿ ಮೂಕಿ ಸಿನಿಮಾ ತೆಗೆಯಲು ಮುಂದಾದರು. ಅದರ ಹೆಸರು 'ಹಿಸ್ ಲವ್ ಅಫೇರ್' ಅದರಲ್ಲಿ ನಾಯಕ ಎಂ.ವಿ. ಸುಬ್ಬಯ್ಯನಾಯ್ಡು – ನಾಯಕಿ ಬಿ. ಜಯಮ್ಮ. ವೀರಣ್ಣನವರು ನಿರ್ಮಿಸಿದ ಮೂಕಿ ಚಿತ್ರಗಳಲ್ಲಿ ನಾಯಕಿಯಾಗಿ ನಟಿಸಿದ್ದ ಜಯಮ್ಮನವರು ಟಾಕಿ ಚಿತ್ರ ಯುಗದಲ್ಲೂ ಯಶಸ್ವಿ ಕಲಾವಿದೆ.

ಕನ್ನಡದ 'ಸದಾರಮೆ' ಸುಭದ್ರ, 'ಜೀವನ ನಾಟಕ ಗುಣಸಾಗರಿ, ರಾಜಾ ವಿಕ್ರಮ, ಇಮ್ಮಡಿ ಪುಲಕೇಶಿ ಪ್ರೇಮಮಯಿ, ಮಾವನ ಮಗಳು, ಅಣ್ಣ – ತಂಗಿ, ಹೇಮರೆಡ್ಡಿ ಮಲ್ಲಮ್ಮ ಸಾಕ್ಷಾತ್ಕಾರ, ಮುಕ್ತಿ ಮೊದಲಾದವು. ತೆಲುಗಿನ 'ಸ್ವರ್ಗಸೀಮ', ತ್ಯಾಗಯ್ಯ ಬ್ರಹ್ಮರಥಂ, ತಮಿಳಿನ 'ಲವಂಗಿ' ಭರ್ತೃಹರಿ ಇತ್ಯಾದಿ ಚಿತ್ರಗಳಲ್ಲಿ ನಟಿಸಿದ ಜಯಮ್ಮನವರು ತ್ರಿಭಾಷಾ ತಾರೆ.



ಡಾ. ರಾಜ್‌ಕುಮಾರ್- ಬಿ. ಜಯಮ್ಮ

ರಂಗನಟಿಯಾಗಿದ್ದು ರಜತ ಪರದೆಯಲ್ಲೂ ಛಾಪು ಮೂಡಿಸಿದ ಜಯಮ್ಮನವರು ಕನ್ನಡ ಲೇಖಕಿಯರ ಸಂಘದ ಅಧ್ಯಕ್ಷರಾಗಿ ಬಹಳ ವರ್ಷ ಶ್ರಮಿಸಿದರು. ಅಶಕ್ತ ಕಲಾವಿದರ ಸಂಘದಲ್ಲೂ ಸಕ್ರಿಯರಾಗಿದ್ದ ಇವರು ಕರ್ನಾಟಕ ವಿಧಾನ ಪರಿಷತ್‌ಗೆ ನಾಮಕರಣಗೊಂಡ ಮೊದಲ ಕಲಾವಿದೆ.

ಕರ್ನಾಟಕ ರಾಜ್ಯೋತ್ಸವ ಪುರಸ್ಕಾರ, ರಾಜ್ಯ ನಾಟಕ ಅಕಾಡೆಮಿ ಪ್ರಶಸ್ತಿ ಸೇರಿದಂತೆ ಹತ್ತಾರು ಗೌರವಗಳಿಗೆ ಪಾತ್ರರಾದ ಬಿ. ಜಯಮ್ಮ ಬಹುಮುಖ ಪ್ರತಿಭೆಯ ಗಣಿ.

ಅಪ್ರತಿಮ ಚೆಲುವು, ಅಸಾಧಾರಣ ನಟನೆ – ಎರಡೂ ಮೇಳೈಸಿದ ಬಿ. ಜಯಮ್ಮ ಕನ್ನಡ ವೃತ್ತಿ ರಂಗಭೂಮಿ ಹಾಗೂ ಚಲನಚಿತ್ರರಂಗದ ಅಭಿಜಾತ ನಟಿ. ದೈವದತ್ತವಾಗಿ ಬಂದಿದ್ದ ರೂಪು ಹಾಗೂ ನಟನಾ ಪ್ರತಿಭೆಯಿಂದ ದಕ್ಷಿಣ ಭಾರತದ ರಂಗ ರಸಿಕರು ಹಾಗೂ

ಚಿತ್ರರಸಿಕರನ್ನು ಸೆಳೆದ ಬಿ. ಜಯಮ್ಮ ರಂಗನಾಯಕಿಯು ಹೌದು. ಚಿತ್ರನಾಯಕಿಯೂ ಹೌದು.

ಕನ್ನಡ ಹಾಗೂ ತೆಲುಗು ಭಾಷೆಗಳಲ್ಲಿ ನಾಟಕಗಳನ್ನು ಅಭಿನಯಿಸುತ್ತಾ, ಚಲನಚಿತ್ರ ರಂಗದಲ್ಲಿ ತ್ರಿಭಾಷಾತಾರೆ ಎನಿಸಿ, ಕನ್ನಡ, ತೆಲುಗು ಮತ್ತು ತಮಿಳು ಭಾಷೆಗಳಲ್ಲಿ ಅಭಿನಯಿಸಿದರು.

ರಂಗಭೂಮಿಯ ಅಂಟುನಂಟಿರುವ ಅವರ ಕುಟುಂಬದಿಂದಲೇ ಇದರಲ್ಲಿ ಪ್ರತಿಭೆ ಸಹಜವಾಗಿ ಅರಳಿತ್ತು. ಅಜ್ಜಿ ರುದ್ರಮ್ಮ, ದೊಡ್ಡಮ್ಮ ಟಿ. ಸುನಂದಮ್ಮ ತಾಯಿ ಕಮಲಮ್ಮ, ಎಲ್ಲರೂ ಕಲಾವಿದರೇ. ಅಂದಿನ ಕಂಪನಿ ನಾಟಕಗಳಲ್ಲಿ ನಟಿಸಿ ಅಪಾರ ಹೆಸರು ಮಾಡಿದ್ದರು. ಇಂತಹ ನಟಿ ಪರಂಪರೆಯ ಮುಂದಿನ ಕುಡಿಯಾಗಿ ಬಿ. ಜಯಮ್ಮ ರಂಗಭೂಮಿಗೆ ಬಂದದ್ದು ಆಕಸ್ಮಿಕವೂ ಹೌದು ಅನಿವಾರ್ಯವೂ ಹೌದು.

ಆಶ್ರಯ ನೀಡಿದ್ದ ಮರವೇ ಬಿಟ್ಟುಹೋದರೆ, ಆಸರೆಗಾಗಿ ಸುತ್ತಿ ಬಳಸಿದ್ದ ಬಳ್ಳಿಯ ಗತಿ ಏನಾಗಬೇಕು? ಒಂದು ರೀತಿಯಲ್ಲಿ ಓದಿಗೆ ತಿಲಾಂಜಲಿ ಇತ್ತು ೯ನೇ

ಡಾ. ರಾಜ್‌ಕುಮಾರ್- ಬಿ. ಜಯಮ್ಮ



ಎಸ್.ಎಂ. ಕೃಷ್ಣ, ವಿ. ಶಾಂತಾರಾಂ, ಕೆ.ಕೆ. ಮೂರ್ತಿ, ಕರಿಬಸಯ್ಯ, ಗುಬ್ಬಿ ವೀರಣ್ಣ, ಬಿ. ಜಯಮ್ಮ



ವಯಸ್ಸಿಗೇ ಬಣ್ಣ ಬಳಿದರು. ವೇದಿಕೆಯ ಮೇಲೆ ತಮ್ಮ ಪ್ರತಿಭೆಯ ಅನಾವರಣ ಮಾಡಿದರು. ಅಲ್ಲಿಂದ ಅವರು ರಂಗ ಮಂಟಪದ ಅನಭಿಷಿಕ್ತ ರಾಣಿಯಾಗಿ ಮೆರೆದದ್ದು ಇತಿಹಾಸ.

ಅಜ್ಜಿ, ದೊಡ್ಡಮ್ಮ, ತಾಯಿಯವರ "ಅಭಿನಯ ಚಾತುರ್ಯವನ್ನು ನೋಡುತ್ತಾ ಬೆಳೆದ ಬಾಲಕಿ ಬಿ. ಜಯಮ್ಮ ಮೊದಲಿಗೆ ಬಾಲ ಕಲಾವಿದೆಯಾಗಿ ತಮ್ಮ ರಂಗಜೀವನ ಪ್ರಾರಂಭಿಸಿದರು. ಬಾಲಕಬೀರ, ಬಾಲ ಅಂಗದ ಮುಂತಾದ ಪಾತ್ರಗಳು ಇವರಲ್ಲಿ ಆತ್ಮ ವಿಶ್ವಾಸ ಹುಟ್ಟಿಸಿದವು. ಮಾತಿಲ್ಲದ ಸೀತೆ ಪಾತ್ರದಿಂದ ಆರಂಭಗೊಂಡ ಇವರ ಜೀವನ ಮಾತಿನ ಮನೆ ವಿಧಾನ ಪರಿಷತ್‌ವರೆಗೂ ಮುಂದುವರಿಯಿತು. ಕಲಾವಿದೆಯಾಗಿ ಕಲಾವಿದರ ಪರವಾಗಿ, ಸರ್ಕಾರದಲ್ಲಿ ಕಿಂಚಿತ್ತು ಸೇವೆ ಸಲ್ಲಿಸುವ ಭಾಗ್ಯವೂ ಇವರದಾಯಿತು. ಹಾಗಾಗಿ ಇವರು ಅಶಕ್ತ ಕಲಾವಿದರ ಶ್ರೇಯೋಭಿವೃದ್ಧಿಗಾಗಿ ದುಡಿದಿದ್ದು ಇವರ ಮಾನವೀಯ, ಅಂತಃಕರಣಕ್ಕೆ ಸಾಕ್ಷಿ.

ದಸ್ತಗೀರ ನಾಟಕ ಕಂಪನಿ, ಅಗಳಿ ತಿಮ್ಮಪ್ಪಯ್ಯ ನಾಟಕ ಮಂಡಲಿಗಳಲ್ಲಿ ಚಿಕ್ಕಪುಟ್ಟ ಪಾತ್ರಗಳನ್ನು ಮಾಡುತ್ತಿದ್ದ ಜಯಮ್ಮ ಬಾಳ ಬಸವೇಗೌಡರ ನಾಟಕ ಕಂಪನಿಯನ್ನು ತಮ್ಮ ದೊಡ್ಡಮ್ಮ ಬಿ. ಸುಂದರಮ್ಮ ಅವರೊಂದಿಗೆ ಸೇರಿದರು. ಆಗ ಜಯಮ್ಮನವರ ವಯಸ್ಸು ಹದಿಮೂರು.

ಜಯಮ್ಮನವರ ನಿಜವಾದ ರಂಗಯಾತ್ರೆ ಪ್ರಾರಂಭಗೊಂಡಿದ್ದು ಶ್ರೀ ಗುಬ್ಬಿ ಚನ್ನಕೇಶ್ವರ ಸ್ವಾಮಿ ನಾಟಕ ಸಭಾವನ್ನು ಸೇರಿದ ನಂತರ. ಗುಬ್ಬಿ ಕಂಪನಿಯೊಂದು ಪ್ರತಿಷ್ಠಿತರ ಅನುಭವ ಮಂಟಪ. ಅಭಿನಯ ಚತುರರು. ಸಂಗೀತ ವಿದ್ವಾಂಸರು, ತಾಂತ್ರಿಕ ಪರಿಣತರು ಮೇಳೈಸಿದ್ದ ಒಂದು ಬೃಹತ್ ರಂಗ ಕಮ್ಮಟ ಶಾಲೆ. ಈ ಶಾಲೆಯಲ್ಲಿ ಸೇರಿದ ಬಿ. ಜಯಮ್ಮನವರಿಗೆ ಪರಿಪೂರ್ಣ ಕಲಾವಿದೆಯಾಗಲು ಅಗತ್ಯವಾದ ಎಲ್ಲಾ ತರಬೇತಿಗಳು ದೊರಕಿದವು. ಸಂಗೀತ, ನೃತ್ಯಗಳ ಕಲಿಕೆ, ಅಭಿನಯದ ಎಲ್ಲಾ ಮರ್ಮಗಳನ್ನು ಅರಿತುಕೊಳ್ಳಲು ಹಿರಿಯರಿಂದ ಮಾರ್ಗದರ್ಶನ ದೊರಕಿ, ಅವರು ಅಭಿನಯಿಸಿದ ಎಲ್ಲಾ ಪಾತ್ರಗಳಿಗೂ ಜೀವ ತುಂಬಿ ರಸಿಕರ ಮನಸೂರೆಗೊಂಡರು.



“

**ವೈವಿಧ್ಯಮಯ ಪಾತ್ರಗಳನ್ನು ಅಭಿನಯಿಸುತ್ತಾ ತಾವು ಅಭಿನಯಿಸಿದ ಪ್ರತಿಪಾತ್ರಕ್ಕೂ ಪಂಡಿತ ಪಾಮರರ ಮೆಚ್ಚುಗೆ ಗಳಿಸುತ್ತಿದ್ದ ಬಿ. ಜಯಮ್ಮ, ‘ದಶಾವತಾರ’ ನಾಟಕದ ‘ಕಯಾದು’ ಪಾತ್ರದಲ್ಲಿ ಅಪಾರ ಮೆಚ್ಚುಗೆ ಗಳಿಸಿದರು. ರಂಗಭೂಮಿಯು ಚಲನಚಿತ್ರರಂಗಕ್ಕೆ ಒಂದು ಚಿಮ್ಮು ಹಲಗೆಯಿದ್ದಂತೆ.**



ಬೆಂಗಳೂರು ಲಾಲ್‌ಬಾಗ್ ಗಾಜಿನ ಮನೆಯಲ್ಲಿ ನಡೆದ ಸಮಾರಂಭವೊಂದರಲ್ಲಿ
ಅಮಿತಾಭ್ ಬಚ್ಚನ್, ಬಿ. ಜಯಮ್ಮ, ಎಂ. ರಘುಪತಿ

ಅಮಿತಾಭ್ ಬಚ್ಚನ್, ಬಿ. ಜಯಮ್ಮ, ಎಂ. ರಘುಪತಿ



'ರಾಜಭಕ್ತಿ' ನಾಟಕದ 'ಮೃಣಾಲಿನಿ', ಕಬೀರದಾಸರು ನಾಟಕದ 'ಬೇಬಿ' ಪಾತ್ರಗಳಿಂದ ಇವರ ರಂಗಪಯಣ ಗುಬ್ಬಿ ಕಂಪನಿಯಲ್ಲಿ ಸಾಗಿತು. ಗುಬ್ಬಿ ವೀರಣ್ಣನವರು ಇವರ ಪ್ರತಿಭೆಯನ್ನು ಗುರುತಿಸಿ, ಸೂಕ್ತ ಮಾರ್ಗದರ್ಶನ ನೀಡಿದರು. ಸದಾರಮೆಯ ಚಂಚಲ ಕುಮಾರಿ, 'ಗುಲೇಬಕಾವಲಿ'ಯ ಚಿತ್ರತಾರೆ, 'ಮನ್ಮಥ ವಿಜಯ'ದ 'ರತಿ' ಪಾತ್ರ ಇವರ ನಟನೆಯ ಶಕ್ತಿಯನ್ನು ತೋರಿದಂತಹ ಪಾತ್ರಗಳು.

'ಸುಭದ್ರಾ ಪರಿಣಯ' ನಾಟಕದಲ್ಲಿ ಅರ್ಜುನನಾಗಿ ಮೇರು ನಟ, ಗಾಯಕ 'ಹೊನ್ನಪ್ಪ ಭಾಗವತರ' ಅವರ ನಟನೆಗೆ ಸಾಟಿಯಾಗಿ ಇವರ 'ಸುಭದ್ರೆ' ಪಾತ್ರ ಅಪಾರ ಜನಪ್ರಿಯತೆ ಗಳಿಸಿತು. ಗಾಯನ ಮತ್ತು ಅಭಿನಯ ಎರಡರಲ್ಲೂ ತಮ್ಮ ಪ್ರತಿಭೆಯನ್ನು ಪ್ರದರ್ಶಿಸುತ್ತಿದ್ದ ಈ ಕಲಾವಿದರು ಅಂದಿನ ಕಾಲದ ಜನಪ್ರಿಯ ಜೋಡಿ. 'ಸದಾರಮೆ' ನಾಟಕದ 'ಸದಾರಮೆ'ಯಲ್ಲೂ ಇವರು ಮಾಡುತ್ತಿದ್ದ ನೋಡಿ ಅಪಾರ.

ಸದಾರಮೆ ಪಾತ್ರವನ್ನು ಹದಿಹರೆಯದಲ್ಲಿ ಹೇಗೆ ಅಭಿನಯಿಸುತ್ತಿದ್ದರೋ. ಅಷ್ಟೇ ಸಮರ್ಥವಾಗಿ ೪೦ರ ವಯೋಮಾನದಲ್ಲೂ ಅಭಿನಯಿಸುತ್ತಿದ್ದುದನ್ನು ಅವರೇ ಸಂದರ್ಶನವೊಂದರಲ್ಲಿ ಹೇಳಿ ಕೊಂಡಿದ್ದಾರೆ.





ವೈವಿಧ್ಯಮಯ ಪಾತ್ರಗಳನ್ನು ಅಭಿನಯಿಸುತ್ತಾ ತಾವು ಅಭಿನಯಿಸಿದ ಪ್ರತಿಪಾತ್ರಕ್ಕೂ ಪಂಡಿತ ಪಾಮರರ ಮೆಚ್ಚುಗೆ ಗಳಿಸುತ್ತಿದ್ದ ಬಿ. ಜಯಮ್ಮ, 'ದಶಾವತಾರ' ನಾಟಕದ 'ಕಯಾದು' ಪಾತ್ರದಲ್ಲಿ ಅಪಾರ ಮೆಚ್ಚುಗೆ ಗಳಿಸಿದರು. ರಂಗಭೂಮಿ, ಚಲನಚಿತ್ರರಂಗಕ್ಕೆ ಒಂದು ಚಿಮ್ಮು ಹಲಗೆಯಿದ್ದಂತೆ. ಗುಬ್ಬಿ ವೀರಣ್ಣನವರ ರಂಗಭೂಮಿಯ ಪ್ರಯೋಗ ಶೀಲತೆ, ವ್ಯವಹಾರಶೀಲತೆ, ಚಲನಚಿತ್ರ ರಂಗಕ್ಕೂ ದಕ್ಕುವುದಕ್ಕೆ ಬಹಳ ಕಾಲ ಬೇಕಾಗಲಿಲ್ಲ.

ಬೆಲ್ಜಿಯಂ ದೇಶದ ಆಲ್‌ಗುಡ್ 'ಹಿಸ್ ಲವ್ ಅಫೇರ್' ಚಿತ್ರದ ನಿರ್ದೇಶಕರು.

ಮುಂದೆ ಚಲನಚಿತ್ರದಲ್ಲಿ ಬಿ. ಜಯಮ್ಮ ಅವರ ಸಾಧನೆ ಅನನ್ಯವಾದುದು. ತ್ರಿಭಾಷಾ ತಾರೆಯಾಗಿ, ೧೯೩೧ರಲ್ಲಿ ಹಿಸ್ ಲವ್ ಅಫೇರ್, ೧೯೩೨ರಲ್ಲಿ ಹರಿಮಾಯ (ಮೂಕಿ ಚಿತ್ರ) ೧೯೩೫ರಲ್ಲಿ ಸದಾರಮೆ, ೧೯೩೮ರಲ್ಲಿ ಗುಲೆ–ಬಾ–ಕಾವಲಿ, ೧೯೪೧ರಲ್ಲಿ ಸುಭದ್ರೆ, ೧೯೪೨ರಲ್ಲಿ ಜೀವನ ನಾಟಕ, ೧೯೪೪ರಲ್ಲಿ ಭರ್ತೃ ಹರಿ (ತಮಿಳು) ೧೯೪೫ರಲ್ಲಿ ಹೇಮರೆಡ್ಡಿ ಮಲ್ಲಮ್ಮ ಸ್ವರ್ಗಸೀಮಾ (ತೆಲುಗು) ೧೯೪೬ ಲಾವಂಗಿ (ತಮಿಳು), ತ್ಯಾಗಯ್ಯ (ತೆಲುಗು) ೧೯೪೭ರಲ್ಲಿ ಬ್ರಹ್ಮರಥಂ (ತೆಲುಗು) ೧೯೪೯ರಲ್ಲಿ ನಾಟ್ಯರಾಣಿ ಮಂಗಯಾರ್ ಅರಸಿ, ೧೯೫೦ರಲ್ಲಿ ರಾಜಾವಿಕ್ರಮ, ೧೯೫೧ರಲ್ಲಿ ಮಂತ್ರದಂಡಂ, ೧೯೫೩ರಲ್ಲಿ ಗುಣಸಾಗರಿ, ಸತ್ಯ ಶೋಧನೈ, ಗುಮಾಸ್ತ, ಜಲದುರ್ಗ/ಕಾರ್ಕೋಟ್ಟೈಯ್, ೧೯೫೮ರಲ್ಲಿ ಅಣ್ಣತಂಗಿ, ೧೯೬೫ರಲ್ಲಿ ಮಾವನಮಗಳು, ೧೯೬೬ರಲ್ಲಿ ಪ್ರೇಮಮಯಿ ೧೯೬೭ರಲ್ಲಿ ಇಮ್ಮಡಿ ಪುಲಿಕೇಶಿ, ೧೯೬೮ರಲ್ಲಿ ಅಣ್ಣತಮ್ಮ, ಬೇಡಿಬಂದವಳು, ೧೯೭೦ರಲ್ಲಿ ಮುಕ್ತಿ, ೧೯೭೧ರಲ್ಲಿ ಸಾಕ್ಷಾತ್ಕಾರ ಚಿತ್ರಗಳಲ್ಲಿ ಬಿ. ಜಯಮ್ಮ ಅಭಿನಯಿಸಿದರು.

* ೩೦ರ ದಶಕದಲ್ಲಿ ವೃತ್ತಿ ನಾಟಕ ಕಂಪನಿಗಳಲ್ಲಿ ತಮ್ಮ ಅಭಿನಯದಿಂದ ಪ್ರಾಬಲ್ಯ ಮೆರೆದ ಅಭಿಜಾತ ಕಲಾವಿದೆ ಬಿ. ಜಯಮ್ಮ
* ಸ್ವಾತಂತ್ರ್ಯ ಪೂರ್ವದಲ್ಲಿ ತಮ್ಮ ಅಭಿನಯ, ಸಂಗೀತ ನೃತ್ಯಗಳಿಂದ ಅಂದಿನ ಕಾಲದ ನಟಿಯರ ಮೇಲೆ ಅಪಾರ ಪ್ರಭಾವ ಬೀರಿದರು.

**ಬದುಕಿನುದ್ದಕ್ಕೂ ಅನೇಕ ಸವಾಲುಗಳನ್ನು ಸಮಾಧಾನವಾಗಿ ಎದುರಿಸಿ ಜಯಮ್ಮ ತಮ್ಮ ಯಜಮಾನರು, ಕಂಪನಿ ಮಾಲೀಕರೂ ಆಗಿದ್ದ ವೀರಣ್ಣನವರ ಎಲ್ಲಾ ಸಾಹಸಗಳಲ್ಲೂ ಕೈಜೋಡಿಸಿದರು.**

* ಗುಬ್ಬಿ ಕಂಪನಿಯ ತೆಲುಗು ಅವತರಣಿಕೆ 'ಕುರುಕ್ಷೇತ್ರ'ದ ನಾಟಕ ಇವರಿಗೆ ಬಹುಭಾಷಾ ತಾರೆಯಾಗುವ ಅವಕಾಶ ಕಲ್ಪಿಸಿತು. ಕುರುಕ್ಷೇತ್ರ ನಾಟಕದ 'ದ್ರೌಪದಿ' ಪಾತ್ರಾಭಿನಯದಿಂದ ಪ್ರಭಾವಿತರಾದ ಮದರಾಸಿನ ವಾಹಿನಿ –ವಿಜಯ ಸಂಸ್ಥೆಯವರು ತೆಲುಗು, ತಮಿಳು ಚಿತ್ರಗಳಲ್ಲಿ ಅಭಿನಯಿಸಲು ಆಹ್ವಾನ ನೀಡಿದರು.
* ಶಾಸ್ತ್ರೀಯ ಸಂಗೀತ ಹಾಗೂ ನೃತ್ಯದ ಕಲಿಕೆ ಇವರಲ್ಲಿದ್ದ ನಟನಾ ಪ್ರತಿಭೆಗೆ ಮತ್ತಷ್ಟು ಮೆರುಗು ತಂದುಕೊಟ್ಟವು. ಅಪಾರ ಪರಿಶ್ರಮ ಹಾಗೂ ಬದ್ಧತೆಯಿಂದ ಅಭ್ಯಾಸ ಮಾಡಿದ ಬಿ. ಜಯಮ್ಮ ಸಮಕಾಲೀನ ನಟಿಯರಿಗೆ ಹಾಗೂ ಅವರ ನಂತರದ ಕಲಾವಿದರಿಗೆ ಮಾದರಿಯಾದರು.
* ಮಳವಳ್ಳಿ ಸುಬ್ಬಣ್ಣ, ಮುನಿಯಪ್ಪ, ಸೇಲಂನ ದೊರೆಸ್ವಾಮಿ ಅಯ್ಯಂಗಾರ್ ಅವರಿಂದ ಶಾಸ್ತ್ರೀಯ ಸಂಗೀತ ಅಭ್ಯಾಸ ಮಾಡಿದರು. ಈ ಕಲಿಕೆ ಅವರ ರಂಗಸಂಗೀತ ಗಾಯನಕ್ಕೆ ಬಹಳ ಸಹಕಾರಿಯಾಯಿತು. ವಯೋಲಿನ್ ಅಭ್ಯಾಸವನ್ನು ಮಾಡಿದರು. ರಾಮೋತ್ಸವ ಸಂಗೀತ ಸಭಾಗಳಲ್ಲಿ ಸಂಗೀತ ಕಾರ್ಯಕ್ರಮಗಳನ್ನು ನೀಡುತ್ತಿದ್ದರು. ಮೋಹನ್ ಲಾಲ್ ಅವರ ಬಳಿ ಕಥಕ್ ನೃತ್ಯವನ್ನು ಅಭ್ಯಾಸ ಮಾಡಿದರು. ಹಿಂದೂಸ್ಥಾನಿ ಸಂಗೀತವನ್ನು ಕೂಡ ಅಭ್ಯಾಸ ಮಾಡಿದರು.

ಇವರು ತಮ್ಮ ಸಹನಟಿಯರಿಗೆ ಮಾರ್ಗದರ್ಶಕರಾಗಿದ್ದರು. ಅಷ್ಟೇ ಅಲ್ಲ, ಇತರ ನಟನೆಯನ್ನು ಆಸಕ್ತಿಯಿಂದ ಗಮನಿಸುವುದು ಜೊತೆಗೆ ಅವರಲ್ಲಿನ ಉತ್ತಮಾಂಶಗಳನ್ನು ಹೊರತೆಗೆದು, ಅವುಗಳನ್ನು ತಮ್ಮ ನಟನೆಯಲ್ಲಿ ಅಳವಡಿಸಿಕೊಳ್ಳಲು ಸೂಚಿಸುತ್ತಿದ್ದರು.

ಹಾಸ್ಯ ಪಾತ್ರಗಳಿಗೆ ಅಷ್ಟಾಗಿ ಒಗ್ಗದ ಜಯಮ್ಮನವರು, ಶೃಂಗಾರ, ಕರುಣ ರಸಗಳಲ್ಲಿ ತಮ್ಮ ಪ್ರಾವಿಣ್ಯತೆ ಸಾಧಿಸಿದರು.

ಬದುಕಿನುದ್ದಕ್ಕೂ ಅನೇಕ ಸವಾಲುಗಳನ್ನು ಸಮಾಧಾನವಾಗಿ ಎದುರಿಸಿ ಜಯಮ್ಮ ತಮ್ಮ



ಬಿ. ಜಯಮ್ಮ, ಬಿ. ಜಯಶ್ರೀ





ಕರ್ನಾಟಕ ವಿಧಾನ ಪರಿಷತ್ ಸದಸ್ಯರ ಗ್ರೂಪ್ ಫೋಟೋವೊಂದರಲ್ಲಿ ಬಿ. ಜಯಮ್ಮ





ಯಜಮಾನರು, ಕಂಪನಿ ಮಾಲೀಕರೂ ಅಗಿದ್ದ ವೀರಣ್ಣನವರ ಎಲ್ಲಾ ಸಾಹಸಗಳಲ್ಲೂ ಕೈಜೋಡಿಸಿದರು.

ಗುಬ್ಬಿ ಕಂಪನಿಯ ಸಂಕಷ್ಟ ಕಾಲದಲ್ಲಿ ಕಂಪನಿಯ ಒಂದು ಶಾಖೆಯನ್ನು ಸಮರ್ಥವಾಗಿ ಮುನ್ನಡೆಸಿದರಲ್ಲದೆ, ಗುಬ್ಬಿ ವೀರಣ್ಣನವರು ಮಕ್ಕಳಿಗಾಗಿಯೇ ಸ್ಥಾಪಿಸಿದ್ದ 'ಬಾಲಕಲಾವರ್ಧಿನಿ'ಯ ಜವಾಬ್ದಾರಿಯನ್ನು ನಿರ್ವಹಿಸಿ, ಮಕ್ಕಳ ಕಂಪನಿಯನ್ನು ಯಶಸ್ಸಿನ ಹಾದಿಯಲ್ಲಿ ನಡೆಸಿದರು. ಬಿ. ಜಯಮ್ಮ ಅವರ ಕುಟುಂಬದ ಕಲಾ ಪರಂಪರೆ ವಿಶಿಷ್ಟವಾದುದು. ಅಜ್ಜಿ ರುದ್ರಮ್ಮ, ತಾಯಿ ಕಮಲಮ್ಮ, ದೊಡ್ಡಮ್ಮ ಸುಂದರಮ್ಮ ಹಾಗೆಯ ಜಯಮ್ಮನವರ ಮಕ್ಕಳಾದ ಜಿ.ವಿ. ಗುರುಸ್ವಾಮಿ, ಜಿ.ವಿ. ಲತಾ, ಜಿ.ವಿ. ಲಕ್ಷ್ಮಿ ಪ್ರಭಾ, ಮೊಮ್ಮಗಳು ಸಂಗೀತ ಎಲ್ಲರೂ ಕಲಾವಿದರೇ. ಹಾಗೆಯೇ ರಂಗಮಾಧ್ಯಮದಲ್ಲಿ ಅಪಾರ ಹೆಸರು ಗಳಿಸಿದವರು.

ಜಯಮ್ಮನವರು ಗುಬ್ಬಿ ಕಂಪನಿಯ ಇತಿಹಾಸದಲ್ಲಿ ಕಲಾವಿದೆಯಾಗಿ, ನಾಯಕ ನಟಿಯಾಗಿ, ಸನ್ನಿವೇಶಕ್ಕನುಗುಣವಾಗಿ ಆಡಳಿತ ನಿರ್ವಹಣೆಯನ್ನು ಮಾಡಿದರು. ಹಾಗೆಯೇ ಗುಬ್ಬಿವೀರಣ್ಣನವರ ಮೂರನೇ ಧರ್ಮಪತ್ನಿಯಾಗಿ, ತಮ್ಮ ಪತ್ನೀ ಧರ್ಮವನ್ನು ಆಚರಿಸಿದರು. ಜಯಮ್ಮನವರ ಪ್ರತಿಭೆ, ರೂಪ, ಪರಿಶ್ರಮಕ್ಕೆ ಮನಸೋತ ವೀರಣ್ಣನವರು, 'ಹಿಸ್ ಲವ್ ಅಫೇರ್' ಮೂಕಿ ಚಿತ್ರದ ನಂತರದಲ್ಲಿ ಮದುವೆಯಾದರು. ಆಗ ಜಯಮ್ಮ ಅವರ ವಯಸ್ಸು ೧೬, ಗುಬ್ಬಿ ವೀರಣ್ಣನವರಿಗೆ ೪೦ ವರ್ಷ. ವಯಸ್ಸಿನ ಅಂತರ ಬಾಧಿಸದ ಸಾರ್ಥಕ ದಾಂಪತ್ಯ ಅವರಿಬ್ಬರದು.

ಬಿ ಜಯಮ್ಮನವರು ಬದುಕಿಸುತ್ತಿದ್ದರೆ, ೨೦೧೫ರ ನವೆಂಬರ್ ೨೬ಕ್ಕೆ ನೂರುವರ್ಷಗಳು ತುಂಬುತ್ತಿದ್ದವು. ಅವರು ಚಿಕ್ಕಮಗಳೂರಿನಲ್ಲಿ ೧೯೧೫ ನವೆಂಬರ್ ೨೬ರಂದು ಜನಿಸಿದರು. ೧೯೨೪ರಲ್ಲಿ 'ಸೀತಾ ಕಲ್ಯಾಣ' ನಾಟಕದಲ್ಲಿ ಒಂದು ಚಿತ್ರ ಪಾತ್ರ – ಸೀತಾ ಸ್ವಯಂವರ ಸಂದರ್ಭದಲ್ಲಿ ಸೀತೆಯಾಗಿ ಬಣ್ಣ ಹಚ್ಚಿದರು. ಆ ಪಾತ್ರಕ್ಕೆ ಒಂದು ಸಂಭಾಷಣೆಯೂ ಇರಲಿಲ್ಲ. ರಸಿಕ ಜನಾನಂದ










ರಂಗಕಲಾವಿದರ ಸಮಾವೇಶದಲ್ಲಿ ವಾಚಾಳ್ ನಾಗರಾಜ್ ಹಾಗೂ ಬಿ. ಜಯಮ್ಮ

**ಗ್ರಾಮೀಣ ಯುವತಿಯೊಬ್ಬಳು ಪ್ರಖ್ಯಾತ ಚಿತ್ರ ತಾರೆಯಾಗುವ ಕಥಾನಕ ಹೊಂದಿದ್ದ 'ಸ್ವರ್ಗಸೀಮಾ' 1945ರಲ್ಲಿ ತೆರೆಕಂಡಿತು. ಈ ತೆಲುಗು ಚಿತ್ರದ ಮೂಲಕ ಬಿ. ಜಯಮ್ಮ ಅಪಾರ ಹೆಸರು ಗಳಿಸಿದರು.**





ಮುಖ್ಯಮಂತ್ರಿ ಆರ್. ಗುಂಡೂರಾವ್,
ವಾಟಾಳ್ ನಾಗರಾಜ್, ಬಿ. ಜಯಮ್ಮ
ಸಮಾರಂಭವೊಂದರಲ್ಲಿ



ನಾಟಕ ಸಭಾದ ಮೂಲಕ ಕನ್ನಡ ರಂಗಭೂಮಿಗೆ ಪಾದಾರ್ಪಣೆ ಮಾಡಿದರು, ನಂತರ ಬಾಳ ಬಸವೇಗೌಡ ಕಂಪನಿ, ಮುಂದೆ ಗುಬ್ಬಿ ಕಂಪನಿಗೆ ಬಂದರು. ವೀರನರಸಿಂಹ ಚರಿತ ನಾಟಕ, ಗುಬ್ಬಿ ಕಂಪನಿಯಲ್ಲಿ ಜಯಮ್ಮನವರು ಅಭಿನಯಿಸಿದ ಮೊದಲ ನಾಟಕ.

ಭಕ್ತ ಪ್ರಹ್ಲಾದ, ದೇವದಾಸಿ, ಸದಾರಮೆ ನಾಟಕಗಳು ಜಯಮ್ಮನವರನ್ನು ರಂಗನಾಯಕಿಯನ್ನಾಗಿಸಿದ ನಾಟಕಗಳು. 'ರಾಜಭಕ್ತಿ'ಯ ರಾಣಿ 'ಮೃಣಾಲಿನಿ' ಪಾತ್ರ ಇವರ ನಟನಾ ಪ್ರತಿಭೆಗೆ ಮೊದಲಿಗೆ ಕನ್ನಡಿ ಹಿಡಿದ ಪಾತ್ರ.

'ಕುರುಕ್ಷೇತ್ರ' ನಾಟಕದ ಇವರ 'ದ್ರೌಪದಿ' ಪಾತ್ರದ ಅಭಿನಯ, ಹಾಡುಗಾರಿಕೆ ಇವರನ್ನು ಮೈಸೂರು ಪ್ರಾಂತ್ಯದಿಂದ ಹೊರಗಿನ ಪ್ರದೇಶಗಳಲ್ಲೂ ಪ್ರಖ್ಯಾತಿ ಪಡೆಯುವಂತೆ ಮಾಡಿತು. ಅಂದಿನ ಮೈಸೂರು ದಿವಾನರಾಗಿದ್ದ ಸರ್ ಮಿರ್ಜಾ ಇಸ್ಮಾಯಿಲ್ ಜಯಮ್ಮ ಅಭಿನಯವನ್ನು ನೋಡಿ ಶ್ಲಾಘಿಸಿದರು.

ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಗುಬ್ಬಿ ಕಂಪನಿಯನ್ನು ಆಹ್ವಾನಿಸಿದಾಗ, 'ಪ್ರಮಿಳಾರ್ಜುನ ಯುದ್ಧ' ನಾಟಕವನ್ನು ಅಭಿನಯಿಸಲಾಗಿತ್ತು. ಕಲಾವಿದರೆಲ್ಲರ ಅಭಿನಯವನ್ನು ಮೆಚ್ಚಿಕೊಂಡ ಮಹಾರಾಜರು ಬಿ. ಜಯಮ್ಮ ಅವರ ಅಭಿನಯವನ್ನು ಮುಕ್ತಕಂಠದಿಂದ ಕೊಂಡಾಡಿದರು. ಸಾಮಾಜಿಕ ಸೇವಾಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡ

ಅಶಕ್ತ ಕಲಾವಿದರ ಸಭೆ ಚಿಕ್ಕಬಳ್ಳಾಪುರದ ಛಾಯಾಗ್ರಾಹಕ ಭವಾನಿ ಸ್ಟುಡಿಯೋ
ಲಕ್ಷ್ಮೀನಾರಾಯಣ್ ಅವರ ಮನೆಯಲ್ಲಿ ನಡೆದಾಗ ವೀರಣ್ಣ, ಕಲ್ಯಾಣ್‌ಕುಮಾರ್ ಮೊದಲಾದವರೊಂದಿಗೆ





ಮುಖ್ಯಮಂತ್ರಿ ಆರ್. ಗುಂಡೂರಾವ್, ಕಾಚಾಲ್ ನಾ[illegible], ಬಿ. ಜಯಮ್ಮ [illegible]ವಂಭವೊಂದರಲ್ಲಿ

ಬಿ. ಜಯಮ್ಮನವರು ಕನ್ನಡ ಮಹಿಳಾ ಲೇಖಕಿಯರ ಸಂಘದ ಅಧ್ಯಕ್ಷರು ಆಗಿದ್ದರು. ೧೯೮೧ರಲ್ಲಿ ಕರ್ನಾಟಕ ವಿಧಾನ ಪರಿಷತ್‌ನ ಸದಸ್ಯರೂ ಆಗಿದ್ದ ಬಿ. ಜಯಮ್ಮ ಅಶಕ್ತ ಕಲಾವಿದರ ಪೋಷಕ ಸಭಾದ ಹುಟ್ಟಿಗೂ ಕಾರಣರಾದರು. ಈ ಅಶಕ್ತ ಕಲಾವಿದ ಪೋಷಕ ಮಹಾಸಭಾದ ಸಂಸ್ಥಾಪಕರು ಕಂಠೀರವ ಸ್ಟುಡಿಯೋ ಸ್ಥಾಪಕರಾದ ಟಿ.ಎಸ್. ಕರೀಬಸವಯ್ಯನವರು.

೧೯೪೫ರಲ್ಲಿ ತೆರೆಕಂಡ ಹೇಮರೆಡ್ಡಿ ಮಲ್ಲಮ್ಮ ಚಲನಚಿತ್ರ ರಾಜ್ಯದ ೬ ಚಿತ್ರಮಂದಿರದಲ್ಲಿ ಶತದಿನಗಳನ್ನು ಪೂರೈಸಿ ದಾಖಲೆ ಸೃಷ್ಟಿಸಿತು. ಗುಬ್ಬಿವೀರಣ್ಣನವರ ನಿರ್ಮಾಣದ ಈ ಚಿತ್ರದಲ್ಲಿ ಬಿ. ಜಯಮ್ಮ, ಹೊನ್ನಪ್ಪ ಭಾಗವತರ್, ಗುಬ್ಬಿವೀರಣ್ಣ, ಸಿ.ಬಿ. ಮಲ್ಲಪ್ಪ ಮುಖ್ಯ ಪಾತ್ರದಲ್ಲಿದ್ದರು. ಎಸ್. ಸುಂದರ ರಾಜನ್ ಅವರು ಈ ಸಿನಿಮಾದ ನಿರ್ದೇಶಕರು. ಶತದಿನೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಮುಂದೆ ರಾಜ್ಯದ ಮುಖ್ಯಮಂತ್ರಿಯಾದ ಎಸ್. ನಿಜಲಿಂಗಪ್ಪನವರು ಬಿ. ಜಯಮ್ಮನವರಿಗೆ ಚಿನ್ನದ ಚೈನ್ ಇದ್ದ ವೆಸ್ಟ್ ಎಂಡ್ ಕೈಗಡಿಯಾರ ನೀಡಿ ಸನ್ಮಾನಿಸಿದರು.

ಗುಬ್ಬಿ ಕಂಪನಿ ಸೇರಿದಾಗ ಬಿ. ಜಯಮ್ಮನವರಿಗೆ ತಿಂಗಳಿಗೆ ೩೦ ರೂ ಸಂಬಳ ನಿಗದಿ ಪಡಿಸಲಾಗಿತ್ತು. ಆಗಿನ ಕಾಲಕ್ಕೆ ಒಬ್ಬ ನಟಿ ಕಂಪನಿಯಿಂದ ಪಡೆಯುತ್ತಿದ್ದ ಅತಿ ಹೆಚ್ಚಿನ ಮೊಬಲಗು ಇದು. ಗುಬ್ಬಿ ಕಂಪನಿ ಸೇರಿದಾಗ ಜಿ. ನಾಗೇಶ್ವರರಾಯರು, ನರಸಿಂಹಯ್ಯ, ರಾಘವೇಂದ್ರರಾಯರಂತಹ ಮಹಾನ್ ನಟರ ಸಮೂಹವೇ ಅಲ್ಲಿತ್ತು. ಮೂರು ತಿಂಗಳು ಬಿ.



'ಮುಕ್ತಿ' ಚಿತ್ರದ ಚಿತ್ರೀಕರಣದಲ್ಲಿ
ನಿರ್ದೇಶಕ ಎನ್. ಲಕ್ಷ್ಮೀನಾರಾಯಣ್
ನಟಿ ಕಲ್ಪನಾ ಅವರೊಂದಿಗೆ
ಬಿ. ಜಯಮ್ಮ

> ರಾಜ್ಯದ ಮುಖ್ಯಮಂತ್ರಿಯಾದ ಎಸ್. ನಿಜಲಿಂಗಪ್ಪ ನವರು ಬಿ. ಜಯಮ್ಮನವರಿಗೆ ಚಿನ್ನದ ಚೈನ್ ಇದ್ದ ವೆಸ್ಟ್ ಎಂಡ್ ಕೈಗಡಿಯಾರ ನೀಡಿ ಸನ್ಮಾನಿಸಿದರು.

ಜಯಮ್ಮನವರಿಗೆ ಗುಬ್ಬಿ ವೀರಣ್ಣ ಅಭಿನಯದ ತರಬೇತಿ ಕೊಡಿಸಿದರು.

ಅವರು ಮೂರನೇ ತರಗತಿಯವರೆಗೆ ಓದಿ ಶಾಲೆ ಬಿಟ್ಟಿದ್ದರು. ಗುಬ್ಬಿ ಕಂಪನಿಗೆ ಬಂದ ಮೇಲೆ ಮೆಟ್ರಿಕ್ಯುಲೇಷನ್ (೧೦ನೇ ತರಗತಿ)ವರೆಗೆ ಜಯಮ್ಮ ಓದು ಮುಂದುವರಿಸಿದರು. ಬಾಲ್ಯದಲ್ಲಿ ಪ್ರಾಥಮಿಕ ಶಾಲೆಯಲ್ಲಿ ಬಳೆಪೇಟೆಯಲ್ಲಿ ಶಿಕ್ಷಕರೊಬ್ಬರು ಜಯಮ್ಮನವರಿಗೆ ಅಭಿನಯ ತರಬೇತಿ ನೀಡಿದ್ದರು. ಹೆಚ್ಚಿನ ಓದು, ಅಭಿನಯ ಕಲಿಕೆಗೆ ಗುಬ್ಬಿ ಕಂಪನಿ ಅವರಿಗೆ ವೇದಿಕೆಯಾಯಿತು.

೧೯೪೧ರಲ್ಲಿ ತೆರೆಕಂಡ 'ಸುಭದ್ರ' ಹಾಗೂ ೧೯೪೨ರಲ್ಲಿ ತೆರೆಗೆ ಬಂದ 'ಜೀವನ ನಾಟಕ' ಚಿತ್ರಗಳಿಗೆ ಖ್ಯಾತ ಸಾಹಿತಿ ಅ.ನ. ಕೃಷ್ಣರಾಯರು ಚಿತ್ರಕಥಾ ಸಾಹಿತ್ಯ ರಚಿಸಿದ್ದರು.

ಗ್ರಾಮೀಣ ಯುವತಿಯೊಬ್ಬಳು ಪ್ರಖ್ಯಾತ ಚಿತ್ರ ತಾರೆಯಾಗುವ ಕಥಾನಕ ಹೊಂದಿದ್ದ 'ಸ್ವರ್ಗಸೀಮಾ' ೧೯೪೫ರಲ್ಲಿ ತೆರೆಕಂಡಿತು ಈ ತೆಲುಗು ಚಿತ್ರದ ಮೂಲಕ ಬಿ. ಜಯಮ್ಮ ಅಪಾರ ಹೆಸರು ಗಳಿಸಿದರು.

೧೯೪೬ರಲ್ಲಿ ತೆರೆಕಂಡ ತೆಲುಗು ಚಿತ್ರ 'ತ್ಯಾಗಯ್ಯ' ದಕ್ಷಿಣ ಭಾರತದ ಚಿತ್ರರಂಗದಲ್ಲೇ ವಿಶಿಷ್ಟ ದಾಖಲೆ



ರಾಜ್ಯಪಾಲ ಧರ್ಮವೀರ ಅವರಿಂದ
ಬಿ. ಜಯಮ್ಮ ಅವರಿಗೆ
ರಾಜ್ಯಪ್ರಶಸ್ತಿ ಪ್ರದಾನ
ಸಾಹಿತಿ ಅ.ನ.ಕೃಷ್ಣರಾಯರೂ
ಚಿತ್ರದಲ್ಲಿದ್ದಾರೆ.

ಸಮಾರಂಭವೊಂದರಲ್ಲಿ ಆರ್. ನಾಗರತ್ನಮ್ಮ, ಬಿ. ಜಯಮ್ಮ, ಆರ್. ನಾಗೇಂದ್ರರಾವ್, ಬಿ.ಎನ್. ಕರಿಬಸವಯ್ಯ,
ಹೊನ್ನಪ್ಪ ಭಾಗವತರ್, ಪಿ. ಕಾಳಿಂಗರಾವ್, ಬಿ.ಆರ್. ನರಸಿಂಹರಾಜು ಅವರುಗಳು.





ಬರೆಯಿತು. ಖ್ಯಾತ ನಿರ್ದೇಶಕ ಬಿ. ನಾಗಯ್ಯ ಈ ಚಿತ್ರದ ನಿರ್ದೇಶಕರು. ಜಯಮ್ಮನವರು, ತ್ಯಾಗಯ್ಯ ಪತ್ನಿ ಧರ್ಮಾಂಬೆ ಪಾತ್ರ ನಿರ್ವಹಿಸಿದ್ದರು. ದೇಶದ ವಿವಿಧ ಭಾಗಗಳಲ್ಲಿ ಈ ಚಿತ್ರ ಪ್ರದರ್ಶನಗೊಂಡಿತು. ಅಲ್ಲದೆ ವಿದೇಶಗಳಲ್ಲೂ ಪ್ರದರ್ಶಿತವಾಯಿತು. ಸಿನಿಮಾ ಪ್ರಿಯರು ಹಾಗೂ ಸಂಗೀತ ಪ್ರಿಯರಿಂದ ಬಿ. ಜಯಮ್ಮ ಅಪಾರ ಮೆಚ್ಚುಗೆಗೆ ಪಾತ್ರರಾದರು. ಗುಬ್ಬಿ ವೀರಣ್ಣ ನಿರ್ಮಿಸಿದ 'ಗುಣಸಾಗರಿ' ಚಿತ್ರ ಕೂಡ ಬಿ. ಜಯಮ್ಮ ಅವರ ಚಿತ್ರ ಜೀವನದ ಒಂದು ಪ್ರಮುಖ ಮೈಲಿಗಲ್ಲು.

೧೯೮೮ರಲ್ಲಿ ತಮ್ಮ ವರ್ಣರಂಜಿತ ಬಣ್ಣದ ಬದುಕು ಹಾಗೂ ಭೌತಿಕ ಜಗತ್ತಿಗೆ ವಿದಾಯ ಹೇಳಿದ ಬಿ. ಜಯಮ್ಮನವರು ಕನ್ನಡ ರಂಗಭೂಮಿ, ಚಲನಚಿತ್ರ ರಂಗ ಕಂಡ ಅಪರೂಪದ ರಂಗನಾಯಕಿ, ಅವರು ರಂಗಭೂಮಿಗೆ, ಚಲನಚಿತ್ರ ರಂಗ ಹಾಗೂ ಸಂಗೀತ ಕ್ಷೇತ್ರಕ್ಕೆ ನೀಡಿದ ಅನನ್ಯ ಕೊಡುಗೆಯನ್ನು ನೆನೆಯುವುದು ಕನ್ನಡಿಗರ ಆದ್ಯ ಕರ್ತವ್ಯ.



# ಬಿ. ಜಯಮ್ಮ

## ರಂಗತಾರೆ

ಶ್ರೀಮತಿ ಬಿ. ಜಯಮ್ಮ ಅವರು ಕನ್ನಡ ನಾಡಿನ ಬೆಳ್ಳಿತೆರೆಯ ಬಂಗಾರದ ತಾರೆ. ಕನ್ನಡ ನಾಡಿನ ಚಲನಚಿತ್ರ ರಂಗಕ್ಕೆ ಬಹುಮೂಲ್ಯ ಕಲಾವಿದರನ್ನು ಕಾಣಿಕೆಯಾಗಿತ್ತ ಗುಬ್ಬಿ ಕಂಪನಿಯ ಮಾಲೀಕರಾದ ಗುಬ್ಬಿ ವೀರಣ್ಣ ಅವರ ಜೀವನ ಸಂಗಾತಿ. ಬಾಲ್ಯದಿಂದಲೇ ರಂಗಭೂಮಿಯ ಬಣ್ಣದ ಲೋಕಕ್ಕೆ ಕಾಲಿಟ್ಟ ಬಿ. ಜಯಮ್ಮನವರು ಹಲವು ಪ್ರಮುಖ ಪಾತ್ರಗಳಲ್ಲಿ ಜನಮನದಲ್ಲಿ ಭದ್ರವಾಗಿ ನೆಲೆಯೂರಿ ರಂಗಭೂಮಿಯಲ್ಲಿ ಚಿರಸ್ಥಾಯಿಯಾದರು.

ಮೂಕಿ ಚಿತ್ರಗಳ ಕಾಲದ ಚಿತ್ರರಂಗದಲ್ಲಿ ಪ್ರವೇಶಿಸಿದ ಬಿ. ಜಯಮ್ಮನವರು. ಮುಂದೆ ಕನ್ನಡ, ತೆಲುಗು ಮತ್ತು ತಮಿಳು ಚಲಚಿತ್ರಗಳಲ್ಲಿ ನಾಯಕಿಯಾಗಿ ಪಾತ್ರವಹಿಸಿದ್ದಾರೆ. ಸ್ವತಃ ನಟರೇ ಗಾಯಕರಾಗಿರಬೇಕಾದ ಅಪೂರ್ವ ಕಾಲಘಟ್ಟದಲ್ಲಿ ಚಲಚಿತ್ರಗಳಲ್ಲಿ ಗಾಯಕಿಯಾಗಿಯೂ, ನಾಯಕಿಯಾಗಿಯೂ ಜನಮನ ಗೆದ್ದವರು ಬಿ. ಜಯಮ್ಮ ಅವರು.

೧೯೧೫ರ ನವೆಂಬರ್ ೨೮ರಂದು ಮಲೆನಾಡಿನ ಸೆರಗು ಚಿಕ್ಕಮಗಳೂರಿನಲ್ಲಿ ಜನಿಸಿದ ಬಿ. ಜಯಮ್ಮನವರು ನಮ್ಮ ಕನ್ನಡ ರಂಗಭೂಮಿ ಮತ್ತು ಚಲನಚಿತ್ರ ರಂಗಗಳಲ್ಲಿ ಅಚ್ಚಳಿಯದ ಛಾಪು ಮೂಡಿಸಿದ್ದಾರೆ. ಅವರ ಜೀವನ ಮತ್ತು ಸಾಧನೆಯ ಈ ಶತಮಾನದ ಅವಲೋಕನ ಮತ್ತು ಅವರ ಸಾಧನೆಗಳ ನೆನಪಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಹೊತ್ತಗೆಯನ್ನು ಪ್ರಕಟಿಸಲಾಗುತ್ತಿದೆ. ಮತ್ತು ಅವರ ಜನ್ಮ ಶತಮಾನೋತ್ಸವ ಕಾರ್ಯಕ್ರಮಗಳನ್ನು ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದೆ. ಇಂತಹ ಹಿರಿಯರ ನೆನಪಿನಲ್ಲಿ ಕಾರ್ಯಕ್ರಮಗಳ ಭಾಗವಾಗಿರುವುದು ನನ್ನ ಸೌಭಾಗ್ಯವೆಂದು ಭಾವಿಸುತ್ತೇನೆ.

–ಉಮಾಶ್ರೀ

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು–೫೬೦ ೦೦೨
ದೂರವಾಣಿ : ೨೨೨೧೩೫೩೦ / ೨೨೨೪೧೩೨೫